ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಅಜ್ಜರಕಾಡು ಮೈದಾನ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಪೃಥ್ವೀರಾಜ ಕವತ್ತಾರು**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**AJJARAKADU MAIDANA:** An Introducing Book on the Places in Karnataka that Played a Major Role in the Freedom Struggle, Written by Prathviraj Kavattaru, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪೃಥ್ವೀರಾಜ ಕವತ್ತಾರು

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೬೪


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೪೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

‘ಅಜ್ಜರಕಾಡು’ ಎಂದು ಸಂಪಾದಕೀಯ ಮಂಡಳಿಯೇ ನೀಡಿರುವ ಶೀರ್ಷಿಕೆ. ಗ್ರಂಥಗಳನ್ನು ಪರಾಮರ್ಶಿಸಿ ಇಸವಿ, ದಿನಾಂಕಗಳನ್ನು ಉಲ್ಲೇಖಿಸುತ್ತ ಹೋದರೆ ಇದನ್ನು ಚರಿತ್ರೆಯನ್ನಾಗಿ ಕಲ್ಪಿಸಬಹುದು. ಬೆಳಗೆರೆ ಕೃಷ್ಣ ಶಾಸ್ತ್ರಿಗಳು, ಸೂರ್ಯನಾಥ ಕಾಮತರ ಪುಸ್ತಕಗಳು ಇಂಥ ಕೆಲಸವನ್ನು ಮಾಡಿವೆ. ಇವು ಮಹತ್ವದ ಆಕರ ಗ್ರಂಥಗಳು ಎಂಬುದರಲ್ಲಿ ಅನುಮಾನವಿಲ್ಲ. ಸ್ವಾತಂತ್ರ್ಯ ಹೋರಾಟವೆಂಬುದು ಹಲವು ಧಾರೆಗಳ ಸಂಯುಕ್ತ ಚರಿತ್ರೆ ಎಂದು ಪರಿಗಣಿಸುವುದಾದರೆ ಆ ಹಲವು ಧಾರೆಗಳನ್ನು ಗುರುತಿಸುವುದು ಹೇಗೆ ಎಂಬುದನ್ನು ವಿಶ್ಲೇಷಿಸುತ್ತ ಹೋದರೆ ಒಂದು ಬಗೆಯ ಚರಿತ್ರೆಯನ್ನು ಕಟ್ಟಬಹುದು. ಇದನ್ನು ಬೇಕಾದರೆ ‘ಕಥನ’ ಎಂದು ಹೇಳಿ. ಚರಿತ್ರೆಯನ್ನು ಕಟ್ಟುವಾಗ ಕರಾರುವಾಕ್ಕು ದಾಖಲೆಗಳು ಬೇಕಾಗುತ್ತವೆ. ಸರಕಾರಿ ಕಚೇರಿಯಲ್ಲಿರುವ ದಾಖಲೆಗಳು, ಸ್ವಾತಂತ್ರ್ಯಯೋಧರು ಬರೆದಿರಬಹುದಾದ ಡೈರಿಗಳು, ಅಧಿಕಾರಿಗಳ ನಡುವೆ ನಡೆದ ಪತ್ರ ವ್ಯವಹಾರಗಳು ಅಧಿಕೃತ ದಾಖಲೆಗಳೆನಿಸಿಕೊಳ್ಳುತ್ತವೆ. ಆದರೆ, ಕಥನವನ್ನು ಕಟ್ಟುವಾಗ ಹೀಗೆ ದಾಖಲೆಗಳನ್ನು ಆಶ್ರಯಿಸುವುದರ ಜೊತೆಗೆ ಮೌಖಿಕ ಆಧಾರಗಳನ್ನು ಪರಿಗಣಿಸಬೇಕಾಗುತ್ತದೆ. ಇಲ್ಲಿ ನಾನು ಮೌಖಿಕವಾದ ಕೆಲವು ಆಧಾರಗಳನ್ನು ಪರಿಗಣಿಸಿದ್ದೇನೆ. ಕಥನಗಳನ್ನು ಪೂರ್ಣವಾಗಿ ಒಪ್ಪಿಕೊಳ್ಳಬೇಕೆಂಬ ಒತ್ತಾಯವಿಲ್ಲ. ಮೌಖಿಕ ಆಕರಗಳಿಗೆ ಹಲವು ಪಠ್ಯಗಳಿರಬಹುದು; ಒಬ್ಬೊಬ್ಬರಲ್ಲಿ ಒಂದೊಂದು ಬಗೆಯ ವಿಚಾರ ಮೂಲಗಳಿರಬಹುದು. ಹಾಗೆಂದು, ದಾಖಲೆಗಳನ್ನು ಸಂಶೋಧಿಸಿ ಬರೆಯಲಾಗುವ ಇತಿಹಾಸವೂ ಪರಿಪೂರ್ಣವೆಂದು ಹೇಳಲಾಗದು. ಅಂಥ ಇತಿಹಾಸ ಪಠ್ಯಗಳ ಬಗ್ಗೆಯೂ ಇಬ್ಬಗೆಯ ದನಿಗಳಿವೆ.

ಸದ್ಯಕ್ಕೆ ಉಡುಪಿಯ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳನ್ನು ಗುರುತಿಸಲು ಸೂರ್ಯನಾಥ ಕಾಮತರ ಪುಸ್ತಕವೇ ಬಹಳ ಮುಖ್ಯವಾದ ಆಕರ ಗ್ರಂಥ.

ಅವರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಸಂಪರ್ಕಿಸಿ ಅವರಿಂದ ಅನುಭವಗಳನ್ನು ಬರೆಸಿ ತರಿಸಿಕೊಂಡಿದ್ದರು. ಅದನ್ನು ಯಥಾವತ್ ಪ್ರಕಟಿಸಿದ್ದರು. ಆದರೆ, ಆಗ ದಿವಂಗತರಾದ ಹಿರಿಯರ ಬರಹಗಳು ಸಿಕ್ಕಿರಲಾರದು, ಜೊತೆಗೆ, ತಮ್ಮ ಬಗ್ಗೆ ತಾವೇ ಬರೆದುಕೊಡಲು ಇಷ್ಟಪಡದವರೂ ಇದ್ದರು. ಬರೆಯಲು ತಿಳಿಯದವರೂ ಇದ್ದರು. ಬರೆದುಕೊಟ್ಟು ಏನಾಗಬೇಕು ಎಂದು ಭಾವಿಸಿದವರೂ ಇದ್ದರು. ಸರಕಾರವು ಸ್ವಾತಂತ್ರ್ಯ ಯೋಧರೆಂದು ಮಾನ್ಯ ಮಾಡಿ ಕೆಲವರಿಗೆ ಸವಲತ್ತುಗಳನ್ನು ನೀಡುತ್ತದೆ. ಹಾಗೆ ಮಾನ್ಯ ಮಾಡಲು ಕೆಲವು ಮಾನದಂಡಗಳೂ ಇದ್ದವು. ಅಂಥ ಮಾನದಂಡದೊಳಗೆ ಒಳಪಡದವರು ಸ್ವಾತಂತ್ರ್ಯ ಯೋಧರ ಪಟ್ಟಿಯಿಂದ ಹೊರಗುಳಿಯುತ್ತಿದ್ದರು. ಸರಕಾರ ಭೂಮಿ ಇತ್ಯಾದಿ ಸವಲತ್ತುಗಳನ್ನು ಕೊಡಲು ಮುಂದಾದಾಗ ಅದನ್ನು ನಯವಾಗಿ ನಿರಾಕರಿಸಿದ ಸ್ವಾಭಿಮಾನಿಗಳೂ ಇದ್ದಾರೆ.

ಪಣಿಯಾಡಿ ಶ್ರೀನಿವಾಸ ಉಪಾಧ್ಯ, ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮರಂಥ ಹಿರಿಯರ ಬಗ್ಗೆ ಕಿರು ಪುಸ್ತಕಗಳು ಬಂದಿವೆ. ಸಾಂತ್ಯಾರು ಅನಂತಪದ್ಮನಾಭ ಭಟ್ಟರಂಥವರು ಮುಂಚೂಣಿಯ ಹೋರಾಟಗಾರರಾಗಿದ್ದರೂ ಅವರ ಬಗ್ಗೆ ಕೃತಿಗಳು ಇದ್ದಂತಿಲ್ಲ. ಅನೇಕರು ಸೂರ್ಯನಾಥ ಕಾಮತರು ಸಂಪಾದಿಸಿದ ಗ್ರಂಥದಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿರುವುದರಿಂದ ಅಷ್ಟರಮಟ್ಟಿಗಾದರೂ ಆಕರಗಳು ಸಿಗುತ್ತವೆ. ಆದರೆ, ಹೀಗೆ ಹೆಸರೇ ದಾಖಲಾಗದ ಎಷ್ಟೊಂದು ಜನರು ಇರಬಹುದು ! ದೇಶದ ಪ್ರಧಾನಮಂತ್ರಿಗಳು 'ಅನ್‌ಸಂಗ್ ಹೀರೋಸ್ ಆಫ್ ಫ್ರೀಡಮ್ ಸ್ಟ್ರಗಲ್' ಕುರಿತು ಸಂಶೋಧನೆ ನಡೆಯಬೇಕೆಂದು ಕರೆ ನೀಡಿರುವುದು ಸ್ವಾತಂತ್ರ್ಯದ ಕಥನ ಸರಣಿಗೆ ಹೊಸ ಆಯಾಮವನ್ನು ನೀಡಬಹುದು.

'ಅಜ್ಜರಕಾಡು' ಎಂಬುದು ಸಂಪಾದಕೀಯ ಮಂಡಳಿ ನೀಡಿರುವ ಶೀರ್ಷಿಕೆಯಾಗಿರುವುದರಿಂದ ಅದರ ಸುತ್ತವೇ ವಿಚಾರಗಳನ್ನು ಜೋಡಿಸಬೇಕೆಂದು, ಅಲ್ಲಿ ಮಾತ್ರ ಸ್ವಾತಂತ್ರ್ಯ ಹೋರಾಟ ಕಾರ್ಯಾಚರಣೆ ನಡೆದದ್ದಲ್ಲ. ೧೯೨೦ರಿಂದ ೧೯೪೭ರ ವರೆಗೂ ಅಜ್ಜರಕಾಡು ಕ್ರಿಯಾಶೀಲ ತಾಣವಾಗಿದ್ದದ್ದು. ಆದರೆ, ಉಡುಪಿಯ ಬಸ್ಸು ನಿಲ್ದಾಣದ ಜಟಕಾಸ್ಟ್ಯಾಂಡ್, ಮಠದ ರಥಬೀದಿ, ಕಟಪಾಡಿ, ಕಲ್ಯಾಣಪುರ, ಮಲ್ಪೆಗಳಲ್ಲಿಯೂ ಸ್ವರಾಜ್ಯ ಸಂಬಂಧಿ ಚಟುವಟಿಕೆಗಳು ತೀವ್ರವಾಗಿದ್ದವು. ಶ್ರೀಮಠದ ಸ್ವಾಮಿಗಳೂ



ಸತ್ಯಾಗ್ರಹಿಗಳಿಗೆ ಆಶ್ರಯ ನೀಡಿದ್ದಾರೆ, ಅಜ್ಜರಕಾಡಿನಲ್ಲಿ ದನಮೇಯಿಸುವ ಹುಡುಗರೂ ಮೆರವಣಿಗೆಯಲ್ಲಿ ಕೂಡಿಕೊಂಡಿದ್ದಾರೆ. ಆಢ್ಯ ಮನೆತನಗಳು, ಭೂಮಾಲೀಕರ ಕುಟುಂಬಗಳು ತಮ್ಮ ಸಿರಿವಂತಿಕೆಯ ಆವರಣವನ್ನು ತೊರೆದು ಹೊರಬಂದರೆ, ಕೂಲಿಕಾರ್ಮಿಕರು, ರೈತಾಪಿ ವರ್ಗದವರು ತಮ್ಮ ಧನಿಗಳ ಹೋರಾಟಕ್ಕೆ ಬೆಂಬಲಕ್ಕೆ ನಿಂತಿದ್ದರು. ದಲಿತವರ್ಗದವರನ್ನು ದೇವಾಲಯಕ್ಕೆ ಪ್ರವೇಶಗೊಡಬೇಕೆಂಬ ಮಹಾತ್ಮ ಗಾಂಧಿಯವರ ಕರೆಯನ್ನು ಮನ್ನಿಸಿ ಮಂದಿರಗಳನ್ನು ಎಲ್ಲರಿಗೂ ಮುಕ್ತವಾಗಿಸಿದ ಉದಾರವಾದಿಗಳ ಕಥನವೂ ಮುಖ್ಯವೇ, ದೇವಸ್ಥಾನವನ್ನು ಮೊತ್ತ ಮೊದಲ ಬಾರಿಗೆ ಧೈರ್ಯವಾಗಿ ಪ್ರವೇಶಿಸಿದ ದಲಿತರ ಕಥನವೂ ಮುಖ್ಯವೇ.

ಉಡುಪಿ ಎಂಜಿಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕರಾದ ವಿನೀತ್ ರಾವ್ ಅವರು ತಮ್ಮ ಅಜ್ಜ ಅನಂತಕೃಷ್ಣ ರಾಯರಿಂದ ಕೇಳಿದ, ಉಡುಪಿ ರಥಬೀದಿಯ ಮಾನಸ್ತಂಭದಲ್ಲಿ ರಾಷ್ಟ್ರಧ್ವಜ ಹಾರಿಸಿದ ಶೇಷ ಅವರ ಕಥೆಯನ್ನು ನನ್ನಲ್ಲಿ ಹೇಳಿದರು. ಈ ಘಟನೆಗೆ ಯಾವುದೇ ಲಿಖಿತ ದಾಖಲೆಗಳಿಲ್ಲ. ಹಾಗೆಂದು, ಈ ಘಟನೆ ಬಹಳ ಮುಖ್ಯವೇ. ತಮ್ಮ ಹಿರಿಯರ ದೇಶಪ್ರೇಮದ ಕಥೆಯನ್ನು ಹೇಳುವಾಗ ಪಾಂಗಾಳ ಗೋಪಾಲಕೃಷ್ಣ ನಾಯಕರು 'ನಮ್ಮ ಕತೆ ಬಿಡಿ, ಹಿಂದೆ ಮುಂದೆ ನೋಡದೆ ಹೋರಾಟದ ಪ್ರವಾಹಕ್ಕೆ ಧುಮುಕಿದ ಗೋಪಾಲ ಕೋಟ್ಯಾನ್‌ರು ನಿಜವಾಗಿ ದೊಡ್ಡವರು ನೋಡಿ' ಎಂದು ಉದ್ಗರಿಸಿದ್ದರು. ಇದೊಂದು ಬಗೆಯ ವಿನಯ. ಇದನ್ನು ಹುಟ್ಟು ಹಾಕಿದ್ದು ಸ್ವಾತಂತ್ರ್ಯ ಚಳುವಳಿಯೇ.

'ಅಜ್ಜರಕಾಡಿಗೆ ಗಾಂಧೀಜಿ ಬಂದಿದ್ದನ್ನು ನೋಡಿದ್ದೇನೆಂದು ನನ್ನ ಅಜ್ಜ ಹೇಳುತ್ತಿದ್ದರು' ಎಂದು ಹೇಳುವ ಇಂದಿನ ಹಿರಿಯರ ಕಣ್ಣುಗಳು ಅಭಿಮಾನದಿಂದ ಹೊಳೆಯುತ್ತವೆ. ಅಜ್ಜರಕಾಡಿನಲ್ಲಿ ವಾಕಿಂಗ್ ಹೋಗುವವರು ಒಂದು ಕ್ಷಣ ಬಂಡೆಯ ಮೇಲೆ ಕಣ್ಣು ಹಾಯಿಸಿ, 'ಗಾಂಧೀಜಿ ಅಲ್ಲಿ ನಿಂತುಕೊಂಡು ಭಾಷಣ ಮಾಡಿದ್ದರು' ಎನ್ನುತ್ತಾರೆ. ಅಜ್ಜರಕಾಡಿನಲ್ಲಿ ಗಾಂಧೀಜಿ ತಮ್ಮ ಮಾತುಗಳ ಮೂಲಕ ಮೂಡಿಸಿದ ವಿನಮ್ರತೆಯ ಭಾವ ಉಡುಪಿಯ ಜನ ಸಮುದಾಯಗಳಲ್ಲಿ ಇವತ್ತಿಗೂ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ಹಾಗಾಗಿಯೇ 'ಅಜ್ಜರಕಾಡು' ಎಂಬುದು ಇತಿಹಾಸದಲ್ಲಿಯೂ ವರ್ತಮಾನದಲ್ಲಿಯೂ ಬಹಳ ಮುಖ್ಯವಾದ ತಾಣ.

ಈ ಕೃತಿಯಲ್ಲಿ ಮಿತಿಗಳಿರಬಹುದು. ಆದರೆ, ಉಡುಪಿಯ ಸ್ವಾತಂತ್ರ್ಯ ಕಥನವನ್ನು ಇನ್ನಷ್ಟು ತಿಳಿದುಕೊಳ್ಳಬೇಕು, ಬೇರೊಂದು ಬಗೆಯಲ್ಲಿ ಬರೆಯಬೇಕು ಎಂದು ಯಾರಿಗಾದರೂ ಅನ್ನಿಸಿದರೆ ಅಷ್ಟರ ಮಟ್ಟಿಗೆ ಕೃತಿ ಸಾರ್ಥಕವಾಯಿತೆಂದು ಭಾವಿಸುವೆ.

ಈ ಕೃತಿ ಬರೆಯುವ ಅವಕಾಶವನ್ನು ನೀಡುವುದರ ಮೂಲಕ ಹೊಸ ರೀತಿಯ ಚಿಂತನೆಗೆ ಅವಕಾಶ ನೀಡಿದ ಅಕಾಡೆಮಿಯ ಅಧ್ಯಕ್ಷರಿಗೆ ಮತ್ತು ಈ ಪುಸ್ತಕ ಮಾಲಿಕೆಯ ಸಂಪಾದಕರಿಗೆ ಕೃತಜ್ಞತೆಗಳು.

ಉಡುಪಿ **ಪೃಥ್ವೀರಾಜ ಕವತ್ತಾರು**
೫೭೬೧೦೧

## ಪರಿವಿಡಿ


ಶುಭ ಸಂದೇಶ ೩

ಶುಭ ಸಂದೇಶ ೫

ಪ್ರಧಾನ ಸಂಪಾದಕರ ಮಾತು ೭

ಲೇಖಕರ ಮಾತು ೧೧

ಸ್ವಾತಂತ್ರ್ಯ ಹೋರಾಟದಲ್ಲಿ 'ಅಜ್ಜರಕಾಡು' ೧೭

ಅಡಿ ಟಿಪ್ಪಣಿಗಳು ೫೬

- ಅನುಬಂಧ
  ಛಾಯಾಚಿತ್ರಗಳು ೫೯
- ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೧

## ಸ್ವಾತಂತ್ರ್ಯ ಹೋರಾಟದಲ್ಲಿ 'ಅಜ್ಜರಕಾಡು'

೧೯೪೨ರ ಆಗಸ್ಟ್‌ನ ಒಂದು ದಿನವಿರಬೇಕು. ಉಡುಪಿ ಮಠದ ಆಸುಪಾಸಿನಲ್ಲಿ ಯು. ಶೇಷ ಎಂಬವರಿದ್ದರು. ಅವರ ಹೆಸರು ಯಾವುದೇ ಇತಿಹಾಸಕಾರರು ನಿರೂಪಿಸಿದ ಸ್ವಾತಂತ್ರ್ಯ ಹೋರಾಟಗಾರರ ಯಾದಿಯಲ್ಲಿ ಇದ್ದಂತಿಲ್ಲ. ಆದರೆ, ಅವರು ಬಹಳ ಮುಖ್ಯವಾದ ಒಂದು ವಿದ್ಯಮಾನಕ್ಕೆ ಕಾರಣರಾಗಿದ್ದರು. 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ' ಅಥವಾ 'ಕ್ವಿಟ್ ಇಂಡಿಯಾ' ಅಥವಾ 'ಚಲೇ ಜಾವ್' ಚಳುವಳಿ ದೇಶದೆಲ್ಲೆಡೆ ತೀವ್ರವಾಗಿದ್ದ ದಿನಗಳವು. ಆಗಸ್ಟ್ ೮ರಂದು ದೇಶದಲ್ಲಿ ಚಿಗುರಿದ ಚಳುವಳಿ ವಟವೃಕ್ಷವಾಗುತ್ತ ಆಗಸ್ಟ್ ೧೦ರ ಸುಮಾರಿಗೆ ಉಡುಪಿಯತ್ತ ಶಾಖೆಯನ್ನು ಚಾಚಿಕೊಂಡಿತು. ಚಳುವಳಿಯ ಭಾಗವಾಗಿ ಎಲ್ಲರೂ ತಮ್ಮ ಮನೆಗಳ ಮಾಡಿನ ಮೇಲೆ, ಕಿಟಕಿಗಳಲ್ಲಿ, ಕಂಬಗಳಲ್ಲಿ ದೇಶದ ತ್ರಿವರ್ಣ ಧ್ವಜ ಹಾರಿಸಬೇಕೆಂಬುದು ಹಿರಿಯರ ಆಶಯವಾಗಿತ್ತು. ರಾಷ್ಟ್ರ ಧ್ವಜವೆಂದರೆ ಮೂರು ಬಣ್ಣಗಳು, ನಡುವೆ ಚರಕ. ಅದು ಸ್ವಾಭಿಮಾನದ, ಸ್ವಾಯತ್ತೆಯ ಸಂಕೇತ. ಅದನ್ನು ಹಾರಿಸಲು ಬ್ರಿಟಿಷರು ಬಿಡುತ್ತಿರಲಿಲ್ಲ. ಆಗ, ಉಡುಪಿಯ ಅಜ್ಜರಕಾಡು, ಜಟಕಾ ಸ್ಟ್ಯಾಂಡ್ ಮತ್ತು ರಥಬೀದಿಗಳು ಚಳುವಳಿಗಳ ಕೇಂದ್ರಗಳಾಗಿದ್ದವು. ರಥಬೀದಿಯಲ್ಲಿ ಸಂದೇಶಾತ್ಮಕವಾದ ಚಟುವಟಿಕೆಗಳು ಜರಗಿದರೆ ಅಜ್ಜರಕಾಡಿನಲ್ಲಿ ಪ್ರಚೋದನಾತ್ಮಕ ಭಾಷಣಗಳು ಜರುಗುತ್ತಿದ್ದವು. ಉಡುಪಿಯ ಈಗಿನ ಬಸ್‌ನಿಲ್ದಾಣ ಬಳಿಯ ಜಟಕಾಸ್ಟ್ಯಾಂಡ್ ಅನೇಕ ಕಾರ್ಯಾಚರಣೆಗಳಿಗೆ ಸಾಕ್ಷಿಯಾಗಿತ್ತು.

### ರಾತ್ರೋರಾತ್ರಿ ಮಾನಸ್ತಂಭದ ಮೇಲೆ ರಾಷ್ಟ್ರಧ್ವಜ

ಆಗ ಉಡುಪಿಯ ತುಳು–ಕನ್ನಡ ಸಾಹಿತಿಯಾಗಿದ್ದ ಶ್ರೀನಿವಾಸ ಉಪಾಧ್ಯ ಪಣಿಯಾಡಿ (ಎಸ್. ಯು. ಪಣಿಯಾಡಿ) ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಅವರದ್ದು ಉಡುಪಿಯ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಹೆಸರು. ೧೯೨೦ರಲ್ಲಿ ಅವರು ಗುಜರಾತಿನ ಬರೋಡಾದ ಒಂದು ಪ್ರಸಿದ್ಧ

ಗ್ರಂಥಾಲಯದಲ್ಲಿ ಉದ್ಯೋಗಿಯಾಗಿ ಸೇರಿದರು. ೧೯೨೩ರಲ್ಲಿ ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿ ಉಡುಪಿಗೆ ಮರಳಿದರು. ಆಗಷ್ಟೇ ದೇಶಾದ್ಯಂತ ಏರುತ್ತಿದ್ದ ಚಳುವಳಿಯ ಕಾವು ಉಡುಪಿಯಲ್ಲಿ ಪ್ರತಿಫಲಿಸಿತ್ತು. ಸಾಹಿತ್ಯ, ಸಂಸ್ಕೃತಿ ಚಟುವಟಿಕೆಗಳೊಂದಿಗೆ ಪಣಿಯಾಡಿ ಶ್ರೀನಿವಾಸ ಉಪಾಧ್ಯರು ಸ್ವದೇಶಿ ಚಳುವಳಿಯನ್ನೂ ತಮ್ಮ ದಿನಚರಿಯ ಭಾಗವಾಗಿ ಸ್ವೀಕರಿಸಿದರು. ಉಡುಪಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ತಳವೂರಲು ಪರಿಶ್ರಮಿಸಿದ ಪಣಿಯಾಡಿಯವರು ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದ ಆಯೋಜನೆಯ ಭಾಗವಾಗಿ ಉಡುಪಿಯಿಂದ ಮಂಗಳೂರಿಗೆ ಮೆರವಣಿಗೆ ಹೊರಟರು. ಕಾರ್ನಾಡು ಸದಾಶಿವರಾವ್, ನಾರಾಯಣ ಕಿಲ್ಲೆಯವರೊಂದಿಗೆ ಪಣಿಯಾಡಿಯವರನ್ನೂ ಪೊಲೀಸರು ಬಂಧಿಸಿದರು. ಅವರನ್ನು ಕೆಲವು ದಿನ ತಿರುಚಿನಾಪಳ್ಳಿಯ ಜೈಲಿನಲ್ಲಿರಿಸಿ ಬಳಿಕ ವೆಲ್ಲೂರು ಜೈಲಿಗೆ ವರ್ಗಾಯಿಸಲಾಯಿತು.  ಜೈಲಿನಲ್ಲಿ ಎಸ್. ಯು. ಪಣಿಯಾಡಿ, ಪೊಳಲಿ ಶೀನಪ್ಪ ಹೆಗಡೆ ಮತ್ತು ಎನ್. ಎಸ್. ಕಿಲ್ಲೆಯವರು ಜೊತೆಯಾಗಿದ್ದರಂತೆ. ೧೯೩೪ರಲ್ಲಿ ಉಡುಪಿಯ ಅಜ್ಜರಕಾಡಿಗೆ ಗಾಂಧೀಜಿಯವರು ಬಂದಾಗ ಅವರ ಸಭೆಯನ್ನು ಆಯೋಜಿಸಿದವರಲ್ಲಿ ಪಣಿಯಾಡಿಯವರೂ ಒಬ್ಬರು. ಅವರ ಪತ್ನಿ ಭಾರತೀಬಾಯಿ ಗಾಂಧೀಜಿಯವರಿಗೆ ತಮ್ಮ ಚಿನ್ನಾಭರಣಗಳನ್ನು ಅರ್ಪಿಸಿದ್ದರು. ತನ್ನ ಮಗ ವಾದಿರಾಜನ ಕೈಯಲ್ಲಿ ಆಭರಣಗಳನ್ನಿರಿಸಿ ಅದನ್ನು ಗಾಂಧೀಜಿಯವರಿಗೆ ಸಮರ್ಪಿಸಿದ್ದರು. ಗಾಂಧೀಜಿಯವರ ಭಾಷಣದಿಂದ ಪ್ರಭಾವಿತರಾಗಿ ದಲಿತರಿಗೆ ದೇವಸ್ಥಾನಕ್ಕೆ ಪ್ರವೇಶ ಕೊಡಿಸುವಲ್ಲಿ ಮುಂಚೂಣಿಯಲ್ಲಿ ಕೆಲಸಮಾಡಿದ್ದರು. ೧೯೩೬ರಲ್ಲಿ ಜವಹರಲಾಲ ನೆಹರೂ ಅವರು ದಕ್ಷಿಣಕನ್ನಡ ಪ್ರವಾಸ ಮಾಡುತ್ತ ಉಡುಪಿಗೂ ಬಂದಿದ್ದರು. ಅವರ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಎಸ್. ಯು. ಪಣಿಯಾಡಿಯವರಿಗೆ ಕರೆ ಬಂದಿತ್ತಂತೆ. ಅವರು ತಮ್ಮ ಒಬ್ಬ ಮಗನಿಗೂ 'ಜವಹರ್' ಎಂದು ಹೆಸರಿಟ್ಟರು. ಅವರು 'ಅಂತರಂಗ' ಎಂಬ ಪತ್ರಿಕೆಯನ್ನು ನಡೆಸಿದ್ದೂ ಉಂಟು.[i] ಇಂಥ ಎಸ್. ಯು. ಪಣಿಯಾಡಿಯವರು ದೇಶಸೇವೆಯ ಕೆಲಸಕ್ಕಾಗಿ ಯುವಕರನ್ನು ಸಜ್ಜುಗೊಳಿಸುತ್ತಿದ್ದರು. ತಪ್ಪ ಪ್ರೆಸ್‌ನಲ್ಲಿ ಕೆಲಸಕ್ಕಿದ್ದ ತರುಣರನ್ನು ಪಿಕೆಟಿಂಗ್, ಚಳುವಳಿಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು. ೧೯೪೨ರ ಆಗಸ್ಟ್ ತಿಂಗಳ ಮಧ್ಯದ ಸುಮಾರಿಗೆ 'ಕ್ವಿಟ್ ಇಂಡಿಯಾ ಚಳುವಳಿ'ಯ ಭಾಗವಾಗಿ ನಿಗದಿತ ದಿನದಂದು ಉಡುಪಿ ರಥಬೀದಿಯಲ್ಲಿ ಬಾವುಟವನ್ನು ಹಾರಿಸಿಯೇ ಸಿದ್ಧ ಎಂದು ನಿರ್ಧರಿಸಿದ್ದರು. ಉಡುಪಿ ಕೃಷ್ಣ ಮಠದ ಮೇಲಿನ ಕಟ್ಟಿಗೆ ರಥದ ಮೇಲೆ ಅಥವಾ ಇನ್ನು ಯಾವುದಾದರೂ ಎತ್ತರದ ಜಾಗದಲ್ಲಿ ಧ್ವಜವನ್ನು ಆರೋಹಿಸಲು ಸಿದ್ಧತೆ ನಡೆದಿತ್ತು. ಹಾಗಾಗಿ, ಕಟ್ಟಿಗೆ ರಥದ ಸುತ್ತಲೂ ಪೊಲೀಸರ ಕಣ್ಣು ಇತ್ತು. ಆದರೆ, ಮಧ್ವ ಸರೋವರವನ್ನು ದಾಟಿ ಆ ಕಡೆ ಸುಲಭವಾಗಿ ಹೋಗಲು ಸಾಧ್ಯತೆ ಇಲ್ಲದಿದ್ದುದರಿಂದ (ಈಗಿನಂತೆ ಸೇತುವೆ ಆಗ ಇಲ್ಲದೇ ಇದ್ದುದರಿಂದ) ಪೊಲೀಸರ ಗಮನ ಅಲ್ಲಿ ಹೆಚ್ಚೇನೂ ಇರಲಿಲ್ಲವೆಂದೇ ಹೇಳಬೇಕು. ಪೊಲೀಸ್ ಕಾವಲು ಇದ್ದದ್ದು ಅನಂತೇಶ್ವರ ದೇವಸ್ಥಾನದ ಮುಂದೆ ಇರುವ ಮಾನಸ್ತಂಭದ ಸುತ್ತ. ಎಲ್ಲೆಡೆಯೂ ಬೂದಿ ಮುಚ್ಚಿದ ಕೆಂಡದಂಥ ವಾತಾವರಣವಿತ್ತು. ಅಜ್ಜರಕಾಡು, ಜಟಕಾಸ್ಟ್ಯಾಂಡ್‌ನತ್ತ ಪೊಲೀಸರು ವಿಶೇಷ ಗಮನವಿರಿಸಿದ್ದರು. ಅಲ್ಲಿಂದ ಜನ ಬಂದು ಮಾನಸ್ತಂಭದ ಮೇಲೆ ಬಾವುಟ ಹಾರಿಸದಂತೆ ಅವರು ನೋಡಿಕೊಂಡಿದ್ದರು.

ಆದರೆ, ಮರುದಿನ ಬೆಳಗ್ಗೆ ನೋಡುವಾಗ ೪೦ ಅಡಿ ಎತ್ತರದ ಮಾನಸ್ತಂಭದ ಮೇಲೆ ಭಾರತದ ಧ್ವಜ ಹಾರುತ್ತಿತ್ತು. ಪೊಲೀಸರ ಕಣ್ಣು ತಪ್ಪಿಸಿ ರಾತ್ರೋರಾತ್ರಿ ಬಾವುಟ ಏರಿಸಿದವರು ಯಾರು? ಬಹುಶಃ ಎಸ್. ಯು. ಪಣಿಯಾಡಿಯವರೇ ಈ ಕೆಲಸ ಮಾಡಿರಬಹುದೆ? ಅಥವಾ ಬೇರೆ ಯಾರಾದರೂ ಈ ಮಹತ್ತರ ಕಾರ್ಯವನ್ನು ಎಸಗಿರಬಹುದೆ? ಉಡುಪಿಯಲ್ಲೇನು, ಇಡೀ ದಕ್ಷಿಣಕನ್ನಡದಲ್ಲಿ ಸುದ್ದಿಯಾಗಿದ್ದ ಘಟನೆಯಿದು! ಈ ಸಾಹಸವನ್ನು ಕೈಗೊಂಡದ್ದು ಎಸ್. ಯು. ಪಣಿಯಾಡಿಯವರ ಪ್ರೆಸ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಓರ್ವ ವ್ಯಕ್ತಿ. ಅವರ ಹೆಸರು ಶೇಷ!

ಶೇಷ ಅವರು ತನ್ನ ಸಂಗಡಿಗರೊಂದಿಗೆ ರಥಬೀದಿಯಲ್ಲಿರುವ ಪಲಿಮಾರು ಮಠದ ಮುಂದಿನಿಂದ ಅಂದರೆ ಅನಂತೇಶ್ವರ ದೇವಸ್ಥಾನದ ಹಿಂದಿನಿಂದ ಛಾವಣಿ ಹತ್ತಿ ಮಾನಸ್ತಂಭ ಏರಿ ಯಾವ ಮಾಯಕದಲ್ಲಿಯೋ ಬಾವುಟವನ್ನು ಹಾರಿಸಿಬಿಟ್ಟಿದ್ದರು!

ಈ ಮಹತ್‌ಕಾರ್ಯ ಬಹುಕಾಲ ಜನರಿಗೆ ತಿಳಿದಿರಲಿಲ್ಲ. ಆ ಘಟನೆ ನಡೆದು ಕೆಲವು ವರ್ಷಗಳ ಬಳಿಕ ಈ ಕುರಿತು ಪತ್ರಿಕೆಯಲ್ಲಿ ಬರೆದು ಶೇಷ ಅವರ ಹೆಸರನ್ನು ಜನಮಾನಸಕ್ಕೆ ಮುಟ್ಟಿಸಿದವರು ಹಿರಿಯ ಪತ್ರಕರ್ತ ಬನ್ನಂಜೆ ರಾಮಾಚಾರ್ಯ ಅವರು!

ಪ್ರಸ್ತುತ 'ಅಜ್ಜರಕಾಡು' ಕುರಿತ ಈ ಕೃತಿಗಾಗಿ ಮಾಹಿತಿಯನ್ನು ಕಲೆ ಹಾಕುವ ಸಂದರ್ಭದಲ್ಲಿ ಮೇಲಿನ ಘಟನೆಯನ್ನು ವಿವರಿಸಿದವರು ಉಡುಪಿ ಎಂಜಿಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಸಂಚಾಲಕರಾಗಿರುವ ವಿನೀತ್‌ರಾವ್. ಅವರಿಗೆ ಈ ಚರಿತ್ರೆಯನ್ನು ಹೇಳಿದವರು ಅವರ ಅಜ್ಜ ಅನಂತಕೃಷ್ಣ ರಾವ್. ಅವರು ಉಡುಪಿಯ ರಥಬೀದಿಯ ಸನಿಹ ಮನೆ ಉಳ್ಳವರಾಗಿ, ಶೇಷ ಅವರ ನೆರೆಮನೆಯವರೂ ಆಗಿದ್ದರು. ಹಾಗಾಗಿ, ಅನಂತಕೃಷ್ಣ ರಾಯರಿಗೆ ಶೇಷ ಅವರ ಕುಟುಂಬದ ಜೊತೆ ನಿಕಟವಾದ ಸಂಪರ್ಕವಿದ್ದುದರಿಂದ ಈ ಘಟನೆಯ ವಿವರಗಳು ಅವರಿಗೆ ಸಹಜವಾಗಿಯೇ ತಿಳಿದಿದ್ದವು.[ii]

## ರಾಷ್ಟ್ರೀಯ ವಿಚಾರದ ಹರಿಕಥೆಗಳು

ತಮ್ಮ ಅಜ್ಜ ಹೇಳುತ್ತಿದ್ದ ಮತ್ತೊಂದು ಸಂಗತಿಯನ್ನು ವಿನೀತ್ ರಾವ್ ನೆನಪಿಸಿಕೊಳ್ಳುತ್ತಾರೆ: ಕೃಷ್ಣ ಮಠದ ಆಸುಪಾಸಿನಲ್ಲಿ ಹರಿಕಥೆಗಳು ಜರಗುತ್ತಿದ್ದವು. ಸುತ್ತಮುತ್ತಲ ಊರುಗಳಿಂದ ಹರಿಕಥಾದಾಸರು ಬರುತ್ತಿದ್ದರು. ಅವುಗಳಲ್ಲಿ ರಾಷ್ಟ್ರೀಯ ವಿಚಾರಗಳು ಬರಬಾರದೆಂದು ಪೊಲೀಸರು ತಾಕೀತು ಮಾಡಿದ್ದರು. ಹರಿಕಥೆಯ ಸಭೆಗಳಿಗೆ ಪೊಲೀಸರು ನೇರವಾಗಿ ಅಥವಾ ಮಫ್ತಿಯಲ್ಲಿ ಬಂದು ಕಥೆಯನ್ನು ಆಲಿಸುತ್ತಿದ್ದರು. 'ದ್ರೌಪದೀ ವಸ್ತ್ರಾಪಹಾರ' ಎಂಬ ಕಥಾನಕವಾಗಿದ್ದರೆ ಪೌರಾಣಿಕ ಹಿನ್ನೆಲೆಯಿಂದಲೇ ಕತೆಯನ್ನು ತೊಡಗುತ್ತಿದ್ದರು. ಈ ಹರಿಕತೆಯಲ್ಲಿ ಸ್ವರಾಜ್ಯಹೋರಾಟಕ್ಕೆ ಸಂಬಂಧಿಸಿದ ವಿಚಾರಗಳು ಬರುವುದಿಲ್ಲ ಎಂದು ಖಾತ್ರಿಯಾದದ್ದೇ ಪೊಲೀಸರು ಮೆಲ್ಲನೆ ವಾಪಸು ಹೋಗುತ್ತಿದ್ದರು. ಪೊಲೀಸರು ಇಲ್ಲವೆಂದು ಖಾತ್ರಿಯಾದದ್ದೇ ಚಾಣಾಕ್ಷರಾದ ಹರಿಕಥಾದಾಸರು ಪುರಾಣ ಕತೆಯನ್ನು ರಾಷ್ಟ್ರಪರ ವಿಚಾರಗಳೊಂದಿಗೆ ಜೋಡಿಸುತ್ತಿದ್ದರು. ನಿದರ್ಶನಕ್ಕೆ, ದ್ರೌಪದೀ ವಸ್ತ್ರಾಪಹಾರದ ದ್ರೌಪದಿಯನ್ನು ಭಾರತಮಾತೆಯೊಂದಿಗೆ ಹೋಲಿಸುತ್ತಿದ್ದರು. ತಮ್ಮನ್ನು ರಕ್ಷಿಸಲು ಶ್ರೀಕೃಷ್ಣ ದೇವರು ಗಾಂಧೀಜಿ ಯಂಥವರನ್ನು ಕಳುಹಿಸಿಕೊಟ್ಟಿದ್ದಾರೆ ಎಂದು ಬಣ್ಣಿಸುತ್ತಿದ್ದರು. ಹರಿಕಥೆಯ ಮೂಲಕವೇ ಜನರಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸುತ್ತಿದ್ದರು. ಉಡುಪಿಯ ಮಠಗಳಲ್ಲಿ ಸ್ವಾಮೀಜಿಗಳು ಸತ್ಯಾಗ್ರಹಿಗಳಿಗೆ, ಚಳುವಳಿಕಾರರಿಗೆ ಆಶ್ರಯ ಕೊಟ್ಟದ್ದುಂಟು.

ಉತ್ತರಕರ್ನಾಟಕ ಅಥವಾ ಕರ್ನಾಟಕದ ಬೇರೆ ಕಡೆಗಳಂತೆ ಇಲ್ಲಿ ಹೋರಾಟದ ಕ್ರಮ ತೀವ್ರವಾಗಿರಲಿಲ್ಲ. ಅಂದರೆ, ಹತ್ಯೆಗಳು, ಹಿಂಸೆಗಳು ನಡೆದದ್ದು ಕಡಿಮೆ. ಹೋರಾಟದ ಮನೋಸ್ಥಿತಿ ಮಾತ್ರ ತೀವ್ರವಾಗಿತ್ತು. ಲಾಠಿಛಾರ್ಜುಗಳಂಥ ನಿಯಂತ್ರಣ ಪ್ರಯತ್ನಗಳು ಪೊಲೀಸರಿಂದ ನಡೆಯುತ್ತಿದ್ದವು. ಆದರೆ, ಚಾಣಾಕ್ಷ ಜನತೆ ಮಾತ್ರ ಪೊಲೀಸರ ಕೈತಪ್ಪಿಸಿ ಚಳುವಳಿಯ ಆಶಯವನ್ನು ಈಡೇರಿಸಿಕೊಳ್ಳುತ್ತಿದ್ದರು. ಆದರೂ, ಅನೇಕ ಮಂದಿ ಜೈಲುವಾಸವನ್ನು ಅನುಭವಿಸಿದ, ತೀವ್ರ ಕಷ್ಟಗಳನ್ನು ಎದುರಿಸಿದ ಕತೆಗಳಿವೆ.

## ಸ್ವರಾಜ್ಯ ವಿಜಯ ತಾಳಮದ್ದಲೆ

ಆಗಸ್ಟ್ ೧೫ರ ಮಧ್ಯರಾತ್ರಿ ಭಾರತ ಸ್ವತಂತ್ರವಾದಾಗ ಅದನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಆಗ ಉಡುಪಿಯ ಅನಂತೇಶ್ವರ ದೇವಸ್ಥಾನದ ಜಗಲಿಯಲ್ಲಿ ಒಂದು ತಾಳಮದ್ದಲೆಯನ್ನು ಆಯೋಜಿಸಲಾಯಿತು. ಪ್ರಸಂಗ ಪುರಾಣದ್ದಲ್ಲ, ಇತಿಹಾಸದ್ದು! 'ಸ್ವರಾಜ್ಯ ವಿಜಯ'![iii] ಇದನ್ನು ಬರೆದವರು ಎಂ. ವಿ. ಹೆಗ್ಡೆಯವರು. ಪ್ರಕಟಿಸಿದವರು 'ಕಿರಿಯರ ಪ್ರಪಂಚ'ದವರು. ಪುಸ್ತಕರೂಪದಲ್ಲಿ ಪ್ರಕಟವಾದದ್ದು ಪ್ರಥಮ ಸ್ವಾತಂತ್ರ್ಯೋತ್ಸವದ ನಾಲ್ಕು ತಿಂಗಳ ಬಳಿಕ ಅಂದರೆ, ೧೯೪೭ರ ದಶಂಬರ ೧೧ರಂದು. ಮುದ್ರಿಸಿದವರು ನವಯುಗ ಪ್ರೆಸ್‌ನ ಮಾಲಕರೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಕೆ. ಹೊನ್ನಯ್ಯ ಶೆಟ್ಟಿ. ಅದು ದ್ವಿತೀಯ ಮುದ್ರಣವನ್ನು ಕಂಡಿದ್ದು ೧೯೫೨ರ ಸ್ವಾತಂತ್ರ್ಯೋತ್ಸವದಂದು.

ಪುರಾಣ ಪ್ರಸಂಗಗಳು ಕೂಡ ಆ ಕಾಲದ 'ರಾಜಕೀಯ ಕಥನ'ಗಳೇ ಆಗಿರುವುದರಿಂದ ಸಮಕಾಲೀನ ರಾಜಕೀಯ ಕಥನವನ್ನು ನಿರೂಪಿಸುವುದು ತಪ್ಪೇನೂ ಅಲ್ಲ ಎಂದು ಪ್ರಸಂಗಕರ್ತ ಎಂ. ವಿ. ಹೆಗ್ಡೆಯವರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದರು. ಮುದ್ರಿತ ಪ್ರಸಂಗದ ಮುಖಪುಟದಲ್ಲಿ ಜವಹರಲಾಲ ನೆಹರೂ ಅವರ ರೇಖಾಚಿತ್ರವಿದೆ. ಗಾಂಧಿ, ನೆಹರೂ, ಜಿನ್ನಾ, ಕೃಪಲಾನಿ ಮುಂತಾದವರೇ ಈ ಕಥಾನಕದ ಪಾತ್ರಗಳು. ಜಿನ್ನಾ ಅವರ ಒಡ್ಡೋಲಗವಿದೆ, ನೆಹರೂ ಅವರೂ ಒಡ್ಡೋಲಗ ಕೊಡುತ್ತಾರೆ, ಬ್ರಿಟಿಷರ ಜೊತೆಗಿನ ಯುದ್ಧವಿದೆ, ಪ್ರಸಂಗದ ಗೀತ ಸಾಹಿತ್ಯ ಛಂದೋಬದ್ಧವಾಗಿದೆ. ರಾಷ್ಟ್ರೀಯತೆಯನ್ನು ಕಲೆಯ ಮೂಲಕ ಅರ್ಥೈಸಿಕೊಂಡ ವಿಶಿಷ್ಟ ಪ್ರಯತ್ನ ಉಡುಪಿಯಲ್ಲಿ ಜರಗಿ ಈ ಘಟನೆ ಇಡೀ ಕರಾವಳಿಗೆ ಮೇಲ್ಪಂಕ್ತಿಯಾಯಿತು. ಆ ಮೇಲಿನ ದಿನಗಳಲ್ಲಿ ಅಂದಿನ ಅಖಂಡ

ದಕ್ಷಿಣಕನ್ನಡ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಈ ತಾಳಮದ್ದಲೆ ಪ್ರಸ್ತುತಿಗೊಂಡಿತು.

ಸಾಮಾನ್ಯವಾಗಿ ತಾಳಮದ್ದಲೆಯ ಪ್ರಸಂಗಗಳು ಆರಂಭಗೊಳ್ಳುವುದು ದೇವತಾಸ್ತುತಿಯ ಮೂಲಕ. 'ಸ್ವರಾಜ್ಯ ವಿಜಯ' ಪ್ರಸಂಗದಲ್ಲಿ ರಾಷ್ಟ್ರವೇ ದೇವರಾಗಿದ್ದಾರೆ. ಈ ಪ್ರಸಂಗದ ಮಂಗಲಾಚರಣೆಯ ಪದ್ಯವನ್ನು ನೋಡಿ:

> **'ವಂದೇ ಭಾರತ ಮಾತೆ । ಕುಂದದ ಸತ್ಕೀರ್ತಿಯುತೆ ॥**
> **ಗಾಂಧಿ ನೆಹರು ಜಗ । ವಂದ್ಯರ ಜನನಿ ಮ । ದಾಂಧರ ರಿಪು ಲೋ।**
> **ಕೇಂದು ಶೋಭಿತೆ ॥**

ಇಲ್ಲಿ ಭಾರತವೇ ದೇವರಾಗಿದೆ. ಭಾರತಮಾತೆಯೇ ದೇವರಾಗಿದ್ದಾಳೆ. ಇಡೀ ದೇಶವು ಸಂಪ್ರದಾಯದ ಆವರಣದಿಂದ ಹೊರಬಂದು ಒಂದು ಬಗೆಯ ರಾಷ್ಟ್ರೀಯವಾದಿ ಸಮಾಜಸಿದ್ಧಾಂತದತ್ತ ಹೊರಳುವ ಆಧುನಿಕ ವಿದ್ಯಮಾನವನ್ನು ಈ ಪ್ರಸಂಗದಲ್ಲಿ ಗುರುತಿಸಬಹುದಾಗಿದೆ.

ಕಳೆದ ಶತಮಾನದ ಪೂರ್ವಭಾಗದಲ್ಲಿ ಉಡುಪಿಯಲ್ಲಿ ಮುಕ್ತಭಾರತದ ಕನಸನ್ನು ಹೊತ್ತ ಎಷ್ಟೊಂದು ಚಟುವಟಿಕೆಗಳು ಜರಗಿದವು! ಎಷ್ಟೊಂದು ಮಂದಿ ಈ ಚಳುವಳಿಯಲ್ಲಿ ಪೊಲೀಸರಿಂದ ಏಟು ತಿಂದರು! ಎಷ್ಟೊಂದು ಮಂದಿ ಕಾರಾಗೃಹವಾಸ ಅನುಭವಿಸಿದರು. ಎಷ್ಟೊಂದು ಮಂದಿಯ ಸಂಸಾರ ಸಂದಿಗ್ಧದಲ್ಲಿ ಸಿಲುಕಿತು! ಎಷ್ಟೊಂದು ಮಂದಿ ಶಾಲೆ ತೊರೆದು ಶಿಕ್ಷಣದಲ್ಲಿ ಅರ್ಧದಲ್ಲಿ ಮೊಟಕುಗೊಳಿಸಿದರು! ಉಡುಪಿಯಲ್ಲಿ ಹೋರಾಟದ ಕಣಕ್ಕಿಳಿದ ಹೆಸರುಗಳನ್ನು ಬರೆಯುತ್ತ ಹೋದರೆ ಪಟ್ಟಿ ದೀರ್ಘವಾಗುತ್ತದೆ. ಹೆಸರೇ ಇಲ್ಲದ ಸ್ವಾತಂತ್ರ್ಯ ಹೋರಾಟಗಾರರು ಅನೇಕರಿದ್ದಾರೆ. ಸ್ವಾತಂತ್ರ್ಯ ಹೋರಾಟ ಎಂಬುದು ಕೇವಲ ರಾಜಕೀಯ ಚಳುವಳಿಯಲ್ಲ, ಅದು ಸಾಮಾಜಿಕ ಆಂದೋಲನವೂ ಹೌದು. ಸ್ವಾತಂತ್ರ್ಯ ಹೋರಾಟವೆಂಬ ಮಹಾನದಿ ಉಕ್ಕೇರಿ ಹರಿದು ಸಾಮಾಜಿಕತೆಯ ಏರಿಳಿತಗಳನ್ನು ಸಮತಟ್ಟು ಮಾಡುತ್ತ ಸಾಗಿತು. ರಾಷ್ಟ್ರಪ್ರೇಮವೆಂಬ ಗಂಗಾನದಿಯಲ್ಲಿ ಎಲ್ಲರೂ ಮಿಂದೆದ್ದರು. ಹೋರಾಟದಲ್ಲಿ ಮೇಲ್ವರ್ಗದವರೂ ಇದ್ದರು, ದಲಿತರೂ ಇದ್ದರು, ಭೂಮಾಲೀಕರೂ ಇದ್ದರು, ವರ್ತಕರೂ ಇದ್ದರು, ರೈತರೂ ಇದ್ದರು, ಕೂಲಿಕಾರ್ಮಿಕರೂ ಇದ್ದರು,



ಕುಶಲಕರ್ಮಿಗಳೂ ಇದ್ದರು, ಕಲಾವಿದರೂ ಇದ್ದರು, ಮಹಿಳೆಯರೂ ಇದ್ದರು, ಮಕ್ಕಳೂ ಭಾಗವಹಿಸಿದರು!

ಉಡುಪಿಯ ಸ್ವಾತಂತ್ರ್ಯ ಹೋರಾಟದ ಕಥನವನ್ನು ಅವಲೋಕಿಸಿದಾಗ ಭಾವನಾತ್ಮಕವಾಗಿ ನಮ್ಮ ಅರಿವಿಗೆ ಬರುವ ಸಂಗತಿ ಎಂದರೆ – ನಾವು ಈಗ ನಿಂತಿರುವುದು ನಮ್ಮ ಅಜ್ಜಂದಿರ ಹೆಗಲ ಮೇಲೆ! ಹಿರಿಯರು ಪಟ್ಟ ಶ್ರಮದ ಪ್ರತಿಫಲವನ್ನು ಉಣ್ಣುತ್ತ ನಾವು ಬದುಕುತ್ತಿದ್ದೇವೆ. ನಮ್ಮ ಸಂಸ್ಕೃತಿ ನಿಂತಿರುವುದೇ 'ಅಜ್ಜರಕಾಡಿನ' ಇತಿಹಾಸವೆಂಬ ಬುನಾದಿಯ ಮೇಲೆ. ಅಜ್ಜರಕಾಡು ಎಂಬುದು ಉಡುಪಿಯಲ್ಲಿರುವ ಸಣ್ಣ ಜಾಗ. ನಿಜವಾಗಿ, ಅದು ಇತಿಹಾಸದ ಕುರಿತ ಒಂದು ರೂಪಕ! ಅದು ಉಡುಪಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರಸ್ಥಳವಾಗಿತ್ತು. ಮಹಾತ್ಮ ಗಾಂಧಿಯವರು ನಡೆದಾಡಿದ ನೆಲ, ನಿಂತು ಭಾಷಣ ಮಾಡಿದ ನೆಲ ಎಂಬ ಅಭಿಮಾನಕ್ಕೆ 'ಅಜ್ಜರಕಾಡು' ಪಾತ್ರವಾಯಿತು. ಮಹಾತ್ಮಗಾಂಧಿ ಅಜ್ಜರಕಾಡಿನಲ್ಲಿ ಮಾಡಿದ ಭಾಷಣ ಇಡೀ ಉಡುಪಿ ಹೋರಾಟಗಾರರಿಗೆ ಹೊಸಬಗೆಯ ಪುಳಕವನ್ನು ಕೊಟ್ಟಿತು. 'ಗಾಂಧಿ ಅಜ್ಜ ಬಂದು ಹೋದ' ಎಂಬ ನೆಲೆಯಲ್ಲಿಯೂ 'ಅಜ್ಜರಕಾಡು' ಅನ್ವರ್ಥಕವೇ. ನಮ್ಮ ಹಿರಿಯರು ಅಂದರೆ ಅಜ್ಜಂದಿರು ರಾಷ್ಟ್ರಪರ ಕ್ರಿಯಾಚರಣೆಗಳಿಗೆ ಕೇಂದ್ರವಾಗಿರಿಸಿಕೊಂಡ ಜಾಗ ಎಂಬರ್ಥದಲ್ಲಿಯೂ 'ಅಜ್ಜರಕಾಡು' ಧ್ವನ್ಯರ್ಥಕವೇ. 'ಅಜ್ಜರಕಾಡು' ಎಂಬುದು ಉಡುಪಿ ಎಂಬ ನಾಡಿನ ಸ್ವರಾಜ್ಯ ಕಥನದ ಮುನ್ನುಡಿ!

## ಮುಕ್ತ ಭಾರತದ ಕನಸು

ಪ್ರಸ್ತುತ ದಿನಗಳಲ್ಲಿ ನಾವು ಉಡುಪಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಉಡುಪಿ ಜಿಲ್ಲೆಯ ಬ್ಯಾಂಕಿಂಗ್ ಇತಿಹಾಸ, ಉಡುಪಿ ಜಿಲ್ಲೆಯ ಪರಿಸರ ಎಂದೆಲ್ಲ ಮಾತನಾಡುತ್ತೇವೆ. ಆದರೆ, ೧೯೯೭ರ ಪೂರ್ವದಲ್ಲಿ ಹೀಗಿರಲಿಲ್ಲ. ಆಗ ಉಡುಪಿ, ದಕ್ಷಿಣಕನ್ನಡ ಜಿಲ್ಲೆಯ ಭಾಗವೇ ಆಗಿತ್ತು. ಹಾಗಾಗಿ, ಸುಮಾರು ೨೫ ವರ್ಷಗಳ ಪೂರ್ವದಲ್ಲಿ 'ಸೌತ್ ಕೆನರ' ಎಂಬ ಶೀರ್ಷಿಕೆಯೊಳಗೆ ಬಂದ ವಿಷಯಗಳಲ್ಲಿ ಉಡುಪಿಯೂ ಸೇರಿರುತ್ತಿತ್ತು. ಪಿ. ಸೂರ್ಯನಾಥ ಕಾಮತ್, ಬೆಳಗೆರೆ ಕೃಷ್ಣ ಶಾಸ್ತ್ರಿ, ಕೆ. ವಿ. ರಮೇಶ್ ಇವರೆಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಕರ್ನಾಟಕ ಸ್ವಾತಂತ್ರ್ಯ ಹೋರಾಟದ ಬಗ್ಗೆ ಕೃತಿಗಳನ್ನು ಪ್ರಕಟಿಸಿದ್ದಾರೆ, ಲೇಖನಗಳನ್ನೂ ಬರೆದಿದ್ದಾರೆ.[iv] ಇಲ್ಲೆಲ್ಲ ದಕ್ಷಿಣ ಕನ್ನಡದ ಸ್ವಾತಂತ್ರ್ಯ ಹೋರಾಟದ

ಕುರಿತ ಪ್ರತ್ಯೇಕ ವಿವರಗಳಿವೆ. ಅದರಲ್ಲಿಯೇ ಉಡುಪಿಯೂ ಸೇರಿ ಹೋಗಿರುತ್ತದೆ. ಪ್ರಸ್ತುತ ಉಡುಪಿಯ ಅಜ್ಜರಕಾಡು ಮತ್ತು ಅಜ್ಜರಕಾಡಿನ ಸುತ್ತಲಿನ ಐತಿಹಾಸಿಕ ವಿಚಾರಗಳ ಕುರಿತು, ಅದರಲ್ಲೂ ವಿಶೇಷವಾಗಿ ಅಜ್ಜರಕಾಡಿಗೆ ಸಂಬಂಧಿಸಿ ಸ್ವಾತಂತ್ರ್ಯ ಇತಿಹಾಸವನ್ನು ಮರು ಅವಲೋಕಿಸುವ ಕುರಿತು ಯೋಚಿಸಿದಾಗಲೆಲ್ಲ ಸಹಜವಾಗಿಯೇ 'ಉಡುಪಿ ಜಿಲ್ಲೆ' ಎಂಬ ಅಸ್ಮಿತೆಯನ್ನು ಜಾಗೃತವಾಗಿರಿಸಿಕೊಂಡು ಬರೆಯಬೇಕಾಗುತ್ತದೆ. ಅಜ್ಜರಕಾಡಿನಲ್ಲಿ ಸಂಭವಿಸಿದ ಘಟನೆಗಳನ್ನು ಇಡೀ ಉಡುಪಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಕೇಂದ್ರವಿದ್ಯಮಾನಗಳಾಗಿ ಪರಿಕಲ್ಪಿಸಬೇಕಾಗುತ್ತದೆ. ೧೯೨೦–೪೭ರ ಅವಧಿಯಲ್ಲಿ ದೇಶದೆಲ್ಲೆಡೆ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಚಳುವಳಿಗಳು ತೀವ್ರವಾಗಿರುವಾಗ ಉಡುಪಿಯಲ್ಲಿ ಸರ್ಕಾರದ ವಿರುದ್ಧ ಕಾರ್ಯಾಚರಣೆಯ ರೂಪುರೇಷೆಗಳು ನಡೆಯುತ್ತಿದ್ದದ್ದು ಅಜ್ಜರಕಾಡಿನಲ್ಲಿ. ಕೊಂಚ ದೂರದ ಕಟಪಾಡಿಯಲ್ಲಿ ಪ್ರಭಾತ್‌ಫೇರಿ ನಡೆಸುವುದಿರಬಹುದು, ರಥಬೀದಿಯಲ್ಲಿ ವಿದೇಶಿ ಬಟ್ಟೆಗಳನ್ನು ಸುಡುವುದಿರಬಹುದು, ಜಟಕಾಸ್ಟ್ಯಾಂಡ್‌ನಲ್ಲಿ ಧ್ವಜ ಹಾರಿಸುವುದಿರಬಹುದು, ಮಲ್ಪೆಯಲ್ಲಿ ಉಪ್ಪು ತಯಾರಿಸುವುದಿರಬಹುದು – ಇವೆಲ್ಲದರ ಪೂರ್ವಭಾವಿ ತೀರ್ಮಾನಗಳು ನಡೆಯುವುದು ಅಜ್ಜರಕಾಡಿನ ಮರಗಳ ನಡುವಿನ ಕತ್ತಲೆಯಲ್ಲಿ!

## ಅಜ್ಜರಕಾಡು : ಸ್ವರಾಜ್ಯ ಹೋರಾಟಗಾರರ ಹಾಡು

'ಅಜ್ಜರಕಾಡು' ಎಂಬ ಪೂರ್ಣಪದದಲ್ಲಿ 'ಅಜ್ಜರ' ಮತ್ತು 'ಕಾಡು' ಎಂಬ ಎರಡು ಪದಗಳಿವೆ. ಯಾವುದಾದರೂ ವೃದ್ಧರಿಗೆ ಸಂಬಂಧಿಸಿದ ಕಾನನ ಪ್ರದೇಶ ಇದಾಗಿರಬಹುದೆ ಎಂಬ ಸಂದೇಹ ಮೂಡುವುದು ತಪ್ಪಲ್ಲ. ಆದರೆ, ಕೆಲವು ಮಂದಿ ಹಿರಿಯರು ಹೇಳುವಂತೆ ಇದು ತುಳುಭಾಷೆಯಲ್ಲಿ 'ಆಜಿ ಊರುದ ಕಾಡ್'. ಕನ್ನಡದಲ್ಲಿ ಇದರ ಅರ್ಥ 'ಆರು ಊರುಗಳ ಕಾಡು'. ಅಂದರೆ, ಆರು ಊರುಗಳ ಜನ ತಮ್ಮ ಜಾನುವಾರುಗಳನ್ನು ಮೇಯಿಸಲು ಬಳಸುತ್ತಿದ್ದ ಕಾನನ ಪ್ರದೇಶ. ಆ ಆರೂ ಊರುಗಳಿಗೆ ಸಂಬಂಧಿಸಿದ ಪ್ರದೇಶವಾದ್ದರಿಂದ ಇದನ್ನು 'ಆಜಿ ಊರ್ದ ಕಾಡ್' ಎನ್ನುತ್ತಿದ್ದರು.[v] ಮುಂದೆ ಇದು ಅಜ್ಜರಕಾಡು ಆಯಿತು. ಕೆಲವು ಹಿರಿಯರು ನೆನಪಿಸಿಕೊಳ್ಳುವ ಪ್ರಕಾರ ಈ ಪ್ರದೇಶದಲ್ಲಿ ಇತ್ತೀಚಿಗಿನವರೆಗೂ ಅಂದರೆ ಸುಮಾರು ಐದು ದಶಕಗಳ ಹಿಂದಿನವರೆಗೂ ಹುಲಿ–ಚಿರತೆಗಳು ಓಡಾಡುತ್ತಿದ್ದವಂತೆ!



'ಅಜಲ್ದ ಕಾಡ್' ಎಂಬುದು ಬಳಕೆಯ ಹಕ್ಕಿನ ವ್ಯಾಪ್ತಿಗೆ ಸಂಬಂಧಿಸಿದ ಭೂಭಾಗ. 'ಅಜಲು' ಎಂದರೆ ಒಂದು ನಿರ್ದಿಷ್ಟ ವ್ಯಾಪ್ತಿಗೆ ಸ್ಥಳೀಯ ಜನಪದರು ಬಳಸಲಾಗುವ ಪದ. 'ಅಜಲ್ದ ಕಾಡು' ಎಂದರೆ ನಿಗದಿತ ಪ್ರದೇಶದವರು ಬಳಸುವ ಕಾಡು ಎಂದು ಅರ್ಥವಿಸಬಹುದು. 'ಅಜಲ್ದ ಕಾಡ್' ಅಥವಾ ಅಜೇಲ್ದ ಕಾಡು ಮುಂದೆ 'ಅಜೇರ್ದ ಕಾಡ್' ಆಗಿ ಮುಂದೆ ತುಳುವಿನಿಂದ ಕನ್ನಡಕ್ಕೆ ಬರುವಾಗ 'ಅಜ್ಜರಕಾಡು' ಆಗಿರಬೇಕು ಎಂಬುದು ಒಂದು ಊಹೆ.

ಅಜ್ಜರಕಾಡು ಎಂದರೆ ಹಿರಿಯರ ಕಾಡು. ಯಾರೋ ವೃದ್ಧರಿಗೆ ಸಂಬಂಧಿಸಿದ ಪ್ರದೇಶ ಆಗಿರಬಹುದು ಎಂಬುದು ಇನ್ನೊಂದು ಸಾಧ್ಯತೆ.[vi]

ಉಡುಪಿ–ಕನ್ನರ್ಪಾಡಿಯ ಹಿರಿಯ ನಾಗರಿಕರಾದ ೮೭ರ ಹರೆಯದ ನಾರಾಯಣ ಸೇರಿಗಾರ ಅವರು ಹೇಳುವ ವಿಚಾರ ಕುತೂಹಲಕರವಾಗಿದೆ : 'ಅಜ್ಜರಕಾಡು' ಪ್ರದೇಶದಲ್ಲಿ ಮೊದಲು ಕಾಡು ಪ್ರದೇಶವೇ ಇತ್ತು. ಕನ್ನರ್ಪಾಡಿ ದೇವಸ್ಥಾನದಿಂದ ಈಗಿನ ಎಲ್‌ಐಸಿ ಕಚೇರಿಯವರೆಗೂ ಒತ್ತೊತ್ತಾದ ಮರಗಳೇ. ಅದು ನಿರ್ದಿಷ್ಟವಾದ ಕುಟುಂಬಕ್ಕೆ ಸೇರಿದ ಜಾಗವಾಗಿತ್ತು. ಮುಂದೆ, ಆ ಕುಟುಂಬದವರಿಗೆ ತೀರ್ವೆ ಕಟ್ಟಲಾಗದೆ ಕಷ್ಟವಾದುದರಿಂದ ಅವರು ಈ ಜಾಗವನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟರಂತೆ. ಇಲ್ಲಿಗೆ ಸುತ್ತಮುತ್ತಲ ಊರಿನವರು ದನ ಮೇಯಿಸಲು ಬರುತ್ತಿದ್ದರು. ಹುಲಿ–ಚಿರತೆಗಳು ದನಗಳನ್ನು ಹಿಡಿಯುವುದೂ ಇತ್ತಂತೆ. ಹಾಗಾಗಿ, ಈ ಜಾಗದ ಒಡೆತನದ ಕುಟುಂಬದವರು ಇಲ್ಲಿಗೆ ಒಬ್ಬ ಕಾವಲುಗಾರನನ್ನು ನೇಮಿಸಿದರಂತೆ. ಆತನ ಹೆಸರು ನಕ್ರ ಸೇರಿಗಾರ. ಆತ ಇಲ್ಲಿಯೇ ಸಣ್ಣ ಗುಡಿಸಲಿನಲ್ಲಿ ಇದ್ದರಂತೆ. ಬಾಲ್ಯದಿಂದ ವೃದ್ಧಾಪ್ಯದವರೆಗೂ ಅಲ್ಲಿಯೇ ಇದ್ದರಂತೆ. ವೃದ್ಧರಾದ ಬಳಿಕ ಅವರನ್ನು ಎಲ್ಲರೂ 'ಅಜ್ಜಾ', 'ಅಜ್ಜಾ' ಎಂದು ಕರೆಯಲಾರಂಭಿಸಿದರು. ಅಜ್ಜರು ವಾಸಿಸುವ ಕಾಡು 'ಅಜ್ಜರ ಕಾಡು' ಆಯಿತು.[vii]

'ಅಜ್ಜರಕಾಡು' ಪ್ರದೇಶವು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಗಮನಾರ್ಹ ಪಾತ್ರವಹಿಸಿದುದನ್ನು ನಾರಾಯಣ ಸೇರಿಗಾರರೂ ನೆನಪಿಸಿಕೊಳ್ಳುತ್ತಾರೆ. ತಮ್ಮ ಬಾಲ್ಯದಲ್ಲಿ ಅಲ್ಲಿ ಸ್ವದೇಶಿ ಚಳುವಳಿಕಾರರ ಸಭೆ ನಡೆದುದನ್ನು ಅವರು ಕಂಡಿದ್ದಾರೆ. ಅವರ ಪ್ರಕಾರ ಈಗಿನ ಎಲ್‌ಐಸಿ ಆಫೀಸು ಆಗಿನ ಜೈಲು ಆಗಿತ್ತಂತೆ. ಅಲ್ಲಿ ಹೋರಾಟಗಾರರನ್ನು ಕೂಡಿ ಹಾಕುತ್ತಿದ್ದರು.

ಅಲ್ಲೊಂದು ಶಾಲೆಯೂ ಇತ್ತು. ಆಗ ಗಡಿಯಾರ, ವಾಚುಗಳಿಲ್ಲದ ಕಾಲ. ಇಂಗ್ಲಿಷರು ಮಧ್ಯಾಹ್ನ ೧೨ ಗಂಟೆಗೆ ಮತ್ತು ರಾತ್ರಿ ೮ ಗಂಟೆಗೆ 'ವಿಜಿಲ್' ಊದಲು ಒಬ್ಬ ಸ್ಥಳಿಯ ವ್ಯಕ್ತಿಯನ್ನು ನೇಮಿಸಿದ್ದರು. ಆತ ಅಜ್ಜರಕಾಡಿನ ಎತ್ತರದ ಬಂಡೆಯ ಮೇಲೆ ನಿಂತುಕೊಂಡು ವಿಜಿಲ್ ಊದುತ್ತಿದ್ದನಂತೆ. ಅಜ್ಜರಕಾಡಿಗೆ ಗಾಂಧಿ ಬಂದು ಹೋದದ್ದು ನಾರಾಯಣ ಸೇರಿಗಾರರಿಗೆ ಕೇಳಿ ಗೊತ್ತು. ಆದರೆ, ಸ್ವಾತಂತ್ರ್ಯ ದೊರೆತ ಸಂದರ್ಭ ಮಾತ್ರ ಖಚಿತವಾಗಿ ನೆನಪಿದೆ. ಹುಡುಗರೆಲ್ಲರೂ ದನ ಮೇಯಿಸುತ್ತಿದ್ದರು. ಆಗ, ಅಜ್ಜರಕಾಡಿನಲ್ಲಿ ಧ್ವಜ ಏರಿಸುವ ಸುದ್ದಿ ಬಂತು. ಅಲ್ಲದೆ, ಸಿಹಿ ಲಡ್ಡುಗಳನ್ನು ಹಂಚುತ್ತಿದ್ದಾರೆಂದು ಗೊತ್ತಾಯಿತು. ಹುಡುಗರೆಲ್ಲ ಆ ಕಡೆ ಧಾವಿಸಿದರು. ಭಾಷಣ, ಸಂಭ್ರಮಾಚರಣೆ ಎಲ್ಲವೂ ಮುಗಿದಾಗ ಮಧ್ಯಾಹ್ನ ದಾಟಿತು. ಮನೆಗೆ ಮರಳುವಾಗ ತಡವಾಯಿತು. ಮನೆಯ ಹಿರಿಯರಿಂದ ಬೈಗಳುಗಳೂ ದೊರೆತವು.

'ಅಜ್ಜರಕಾಡು' ಪದನಿಷ್ಪತ್ತಿಯ ನಿಷ್ಕರ್ಷೆ ಇಲ್ಲಿ ಸಾಂದರ್ಭಿಕವಾದ ಪ್ರಸ್ತಾವನೆ ಮಾತ್ರ. ಇದು ಈ ಲೇಖನದ ಪ್ರಧಾನ ಉದ್ದೇಶವಲ್ಲ. ಈಗ ಅಜ್ಜರಕಾಡಿನಲ್ಲಿ ಕಾಡೇ ಇಲ್ಲ. ಅದು ನಾಡಾಗಿ ಬದಲಾಗಿದೆ. ಸುತ್ತಮುತ್ತ ಕಟ್ಟಡಗಳಿವೆ, ಅಂಗಡಿಗಳಿವೆ. ಉಡುಪಿ ಪೇಟೆಯ ಮುಖ್ಯ ಕ್ರೀಡಾಂಗಣ, ಬಯಲು ರಂಗಮಂದಿರ, ಉದ್ಯಾನವನ, ಮಕ್ಕಳ ಆಟದ ತಾಣ – ಇವೆಲ್ಲ ಇರುವುದು ಇಲ್ಲಿಯೇ. ಸಂಜೆಯ ಹೊತ್ತು ಇಲ್ಲಿನ ಉದ್ಯಾನವನದಲ್ಲಿ ಜನ 'ನಡಿಗೆ', 'ವ್ಯಾಯಾಮ' ಮಾಡುತ್ತಾರೆ. ಅಲ್ಲಿಯೇ ಒಂದು ಎತ್ತರದ ಪ್ರದೇಶದಲ್ಲಿ ಗಾಂಧಿ ಟವರ್ ಇದೆ. ಕೆಲವು ವರ್ಷಗಳ ಹಿಂದೆ ಇಲ್ಲೊಂದು ಮಂಟಪವನ್ನು ನಿರ್ಮಿಸಿ ಗಾಂಧೀಜಿಯವರ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ದೇಶದ ಎಲ್ಲ ಸಣ್ಣ ಊರುಗಳಲ್ಲಿ 'ಗಾಂಧಿ'ಗಳಿದ್ದಾರೆ. ಉಡುಪಿಯ ಪ್ರದೇಶದಲ್ಲಿಯೂ ಕಟಪಾಡಿಯ ಗಾಂಧಿ, ಕಲ್ಯಾಣಪುರದ ಗಾಂಧಿ ಅಂತ ಹೆಸರು ಪಡೆದವರಿದ್ದರು. ಮಹಾತ್ಮ ಗಾಂಧಿಯವರಿಂದ ಅಗಾಧವಾಗಿ ಪ್ರಭಾವಿತರಾಗಿ ಅವರದೇ ಧ್ಯೇಯಾದರ್ಶಗಳನ್ನು ಪಾಲಿಸುತ್ತ ರಾಷ್ಟ್ರಪರವಾದ ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದ ಸ್ಥಳೀಯರು ಅಂಥ ಬಿರುದಿಗೆ ಭಾಜನರಾಗುತ್ತಿದ್ದರು. ಸಾಂತ್ಯಾರು ಅನಂತಪದ್ಮನಾಭ ಭಟ್ಟರು ಉಡುಪಿಯ ಗಾಂಧಿ ಎಂದೇ ಪ್ರಸಿದ್ಧರು.[viii] ಕಾರ್ಕಳ ಮುನಿಯಾಲಿನ ಎಳ್ಳಾರೆಯ ನಿವಾಸಿಯಾಗಿದ್ದ ಕಾಂತಪ್ಪ



ಪೂಜಾರಿಯವರನ್ನು 'ಮುಳ್ಕಾಡಿನ ಗಾಂಧಿ' ಎಂದು ಕರೆಯುತ್ತಿದ್ದರು. ಅವರು ವಾಸಿಸುತ್ತಿದ್ದ ಮನೆಯೂ 'ಗಾಂಧಿ ಮನೆ' ಎಂದೇ ಖ್ಯಾತ.[ix] ಬಳ್ಕೂರಿನ ರಾಮಣ್ಣ ಶೆಟ್ಟರು 'ಗಾಂಧಿ ರಾಮಣ್ಣ ಶೆಟ್ಟ'ರೆಂದೇ ಜನಪ್ರಿಯರು. ಅಂತೆಯೇ, ದೇಶದೆಲ್ಲೆಡೆಯ ಊರುಗಳಲ್ಲಿ ನೂರಾರು 'ಗಾಂಧೀ ಮೈದಾನ' ಗಳಿವೆ. ಗಾಂಧೀಜಿ ಅಲ್ಲಿಗೆ ಭೇಟಿ ಕೊಟ್ಟಿದ್ದರಿಂದ ಆ ಪ್ರದೇಶಕ್ಕೆ ಗಾಂಧಿ ಮೈದಾನ ಎಂಬ ಶೀರ್ಷಿಕೆ ಬಂದಿದೆ ಎಂಬುದು ಸರಳ ಗ್ರಾಹ್ಯ. ಹಾಗೆ ನೋಡಿದರೆ, ಅಜ್ಜರಕಾಡು ಕೂಡ ಗಾಂಧಿ ಮೈದಾನವೇ. ಆದರೆ. ಹಾಗೆಂದು ಅದನ್ನು ಯಾರೂ ಕರೆಯುವುದಿಲ್ಲ. ಗಾಂಧಿ ಆ ಜಾಗಕ್ಕೆ ಬಂದು ಹೋಗಿದ್ದರು ಎಂಬುದು ಐತಿಹಾಸಿಕ ಸತ್ಯ.

## ಅಜ್ಜರಕಾಡಿಗೆ ಗಾಂಧೀಜಿಯವರ ಭೇಟಿ

ಉಡುಪಿ ಹೇಳಿಕೇಳಿ ದೇಗುಲದ ನಾಡು. ಶ್ರೀಕೃಷ್ಣ ಮಂದಿರವು ಉಡುಪಿಯ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಕಾಣಿಸುವಂತೆ ಮಾಡಿದೆ. ದಾರ್ಶನಿಕರಾದ ಮಧ್ವಾಚಾರ್ಯರಿಂದ ತೊಡಗಿ ವಾದಿರಾಜ ಸ್ವಾಮಿಗಳವರೆಗೂ ಸಾಮಾಜಿಕರಲ್ಲಿ ಪುರೋಗಾಮಿ ಧೋರಣೆಯನ್ನು ಪಸರಿಸಿದವರು. ಇದೇ ಊರಿನಲ್ಲಿ ಪ್ರಸಿದ್ಧವಾದ ಮಸೀದಿಯೂ ಇದೆ, ಇಗರ್ಜಿಯೂ ಇದೆ. ಸಾಮರಸ್ಯದ ಬಾಳ್ವೆಗೆ ಹೆಸರಾದ ಊರು ಇದು. ಉಡುಪಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಕೂಡ ಎಲ್ಲರನ್ನು ಒಳಗೊಂಡಂಥ ಐತಿಹಾಸಿಕ ಘಟನೆಯಾಗಿತ್ತು. ಆ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಬಿಟ್ಟರೆ ಮತ್ತೆ ಪ್ರಮುಖ ಕೇಂದ್ರ ಉಡುಪಿ. ಈ ಎರಡು ಪಟ್ಟಣಗಳ ನಡುವಿನ ದೂರ ಸುಮಾರು ೬೦ ಕಿಲೋಮೀಟರ್‌ಗಳು. ನಡುವೆ ಪ್ರಮುಖ ನಾಲ್ಕು ನದಿಗಳಿವೆ. ಅವುಗಳಲ್ಲಿ ಫಲ್ಗುಣಿ ನದಿಯ ಸೇತುವೆ ಬಿಟ್ಟರೆ ಉಳಿದ ನದಿಗಳಿಗೆ ಸೇತುವೆ ನಿರ್ಮಾಣವಾದದ್ದು ೫೦ರ ದಶಕದ ಬಳಿಕವೇ. ಮಂಗಳೂರಿನಿಂದ ಜನ ಉಡುಪಿಗೆ ಬರಬೇಕಾದರೂ ನದಿಯಲ್ಲಿ ದೋಣಿಯ ಸಹಾಯದಿಂದಲೇ ಬರಬೇಕು. ಮಂಗಳೂರಿನಿಂದ ಗಾಂಧೀಜಿ ಉಡುಪಿಗೆ ಬಂದಿದ್ದರು ಎಂದಾಗಲೆಲ್ಲ ಈ ನದಿಗಳನ್ನು ಉತ್ತರಿಸಿ ಬಂದಿದ್ದರು ಎಂಬುದನ್ನು ಮರೆಯಬಾರದು. ಅದು ಒಂದು ಬಗೆಯಲ್ಲಿ ತುಳುನಾಡಿನ ರಾಜಪ್ರಭುತ್ವದ ಇತಿಹಾಸದ ಸೀಮೆಗಳನ್ನು ಉತ್ತರಿಸಿ ಬಂದ ಹಾಗೆ ! ವಿಜಯನಗರದ ಅರಸರು, ಜೈನ ಮನೆತನದವರು, ಕೆಳದಿನಾಯಕರು, ಹೈದರಾಲಿ ಸೇರಿದಂತೆ ಎಷ್ಟೊಂದು ಪ್ರಭುತ್ವಗಳ ಅಧೀನದಲ್ಲಿತ್ತು ಈ ಪ್ರದೇಶ!

ಗಾಂಧೀಜಿಯವರ ಅಜ್ಜರಕಾಡಿನ ಸಭೆ ಪ್ರಜಾಪ್ರಭುತ್ವಾತ್ಮಕ ಆಶಯವನ್ನು ಜಾಗೃತಗೊಳಿಸಿತು.

**೧೯೩೪ ಫೆಬ್ರವರಿ ೨೫ರಂದು ಗಾಂಧೀಜಿಯವರು ಅಜ್ಜರಕಾಡಿನ ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶವಿದು :**

ಗೆಳೆಯರೇ,

*ಉಡುಪಿ ಬಹಳ ದಿನಗಳಿಂದಲೂ ನನ್ನ ಮನಸ್ಸಿನಲ್ಲಿ ಇತ್ತು. ಉಡುಪಿಯ ಪ್ರಸಿದ್ಧಿಗೆ ನಿಜವಾಗಿ ನೀವೇ ಕಾರಣರು. ಅನೇಕರು ಉಡುಪಿಯ ಕುರಿತು ನನ್ನೊಂದಿಗೆ ಹೇಳಿದ್ದಾರೆ. ಇಲ್ಲಿನ ಪ್ರಸಿದ್ಧ ದೇವಸ್ಥಾನದಲ್ಲಿ ದೇವರು ಭಕ್ತನತ್ತ ತಿರುಗಿದ ಉದಾಹರಣೆ ಇದೆ. ಉಡುಪಿಗೆ ಬಂದರೆ ಇಲ್ಲಿನವರು ನನಗೆ ಅಗಾಧ ಪ್ರಮಾಣದಲ್ಲಿ ನಿಧಿಯನ್ನು ಸಮರ್ಪಿಸುತ್ತಾರೆ ಎಂದು ಕೆಲವರು ಹೇಳಿದ್ದರು. ಈಗ ರೂ. ೧೨೪೦ನ್ನು ನೀಡುವುದರ ಮೂಲಕ ಈ ಮಾತನ್ನು ನಿಜಗೊಳಿಸಿದ್ದೀರಿ. ಈಗಷ್ಟೇ ನಾನು ಒಂದು ಖಾದಿ ಭಂಡಾರವನ್ನು ಉದ್ಘಾಟನೆ ಮಾಡಿದೆ. ಸಮಾಜದ ಸಮಸ್ಯೆಯನ್ನು ಪರಿಹರಿಸಲು ಕೂಡ ಅಂಥ ಕಷ್ಟವಿಲ್ಲ. ಈಗ ನೀವು ನನಗೆ ಏನು ಮಾತುಕೊಡಬೇಕೆಂದರೆ ಇಲ್ಲಿ ಹರಿಜನರಿಗಾಗಿ ದೇವಸ್ಥಾನಗಳು ತೆರೆಯುತ್ತಿವೆ ಎಂಬುದಾಗಿ. ಹರಿಜನರನ್ನು ದೇವಸ್ಥಾನಕ್ಕೆ ಪ್ರವೇಶಿಸಲು ಅವಕಾಶ ಮಾಡಿಕೊಡುವುದು ಹಿಂದೂಗಳ ಆತ್ಮಶುದ್ಧಿಯ ಕೆಲಸವಾಗಿದೆ. ಇಲ್ಲಿ ಹರಿಜನ ಉದ್ಧಾರದ ಕೆಲಸ ಹೆಚ್ಚಾಗಿ ನಡೆಯಬೇಕು ಮತ್ತು ಆ ಮೂಲಕ ಇದು ಉಳಿದ ಪ್ರದೇಶಗಳಿಗೆ ಆದರ್ಶವಾಗಬೇಕು. ನಾವೆಲ್ಲರೂ ಒಂದೇ ದೇವರ ಮಕ್ಕಳು ಮತ್ತು ಹರಿಜನರಿಗೆ ಅನ್ಯಾಯವೆಸಗಿದರೆ ದೇವರಿಗೇ ದ್ರೋಹ ಬಗೆದಂತೆ. ಅಸ್ಪೃಶ್ಯತಾ ನಿವಾರಣೆ ಎಂಬುದು ನಮ್ಮ ನಡುವಿನ ಸಹೋದರತಾ ಭಾವವನ್ನು ಜಾಗೃತಗೊಳಿಸಿಕೊಂಡಂತೆ.*[x]

ಗಾಂಧೀಜಿ ಅಜ್ಜರಕಾಡಿಗೆ ಬರುವಾಗ ಅವರನ್ನು ಸ್ವಾಗತಿಸಿದವರು ಹಾಜಿ ಅಬ್ದುಲ್ಲಾ. ಅವರ ಪೂರ್ಣ ಹೆಸರು ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಖಾಸಿಮ್ ಸಾಹೇಬ್ ಬಹದ್ದೂರ್. ಅವರು ಈ ಭಾಗದ ಅಧ್ಯಕ್ಷರಾಗಿದ್ದರು. ಗಾಂಧೀಜಿ ಅಜ್ಜರಕಾಡು ಮೈದಾನದಲ್ಲಿ ತುಂಬ ಹೊತ್ತು ಕಳೆದರು. ಗಾಂಧೀಜಿ ಅವರ ಸಮಕ್ಷ ಹಿಂದಿಯಲ್ಲಿ ಬಿನ್ನವತ್ತಳೆಯನ್ನು ಓದಿದವಳು ನಿರುಪಮಾ



ಎಂಬ ಪುಟ್ಟ ಹುಡುಗಿ. ಗಾಂಧೀಜಿ ಹಿಂದಿ ಭಾಷೆ ಮಹತ್ವವನ್ನು ಕೂಡ ಎತ್ತಿಹಿಡಿದರು.

## ಸ್ವಾತಂತ್ರ್ಯ ಹೋರಾಟದ ಇತಿಹಾಸ

ಪರಕೀಯರ ಆಗಮನದ ಇತಿಹಾಸದ ಜೊತೆಗೆ ಉಡುಪಿಯ ಸಂಪರ್ಕ ಇನ್ನೂ ಹಿಂದಕ್ಕೆ ಹೋಗುತ್ತದೆ. ಭಾರತವನ್ನು ಮೊದಲು ಯುರೋಪಿಯನ್ನರಿಗೆ ಕಾಣಿಸಿದವನು ಪೋರ್ಚುಗೀಸ್ ನೌಕಾಯಾನಿ ವಾಸ್ಕೊ ಡ' ಗಾಮಾ. ೧೪೯೭ – ೯೯ರ ನಡುವಿನ ಅವನ ಯಾನದಲ್ಲಿ ಆತ ಉಡುಪಿಯ 'ಕಲ್ಪತರು ದ್ವೀಪ'ದಲ್ಲಿ ಹೆಜ್ಜೆ ಇರಿಸಿದ್ದನಂತೆ. ಆತ ಕಲ್ಲಿಕೋಟೆಯಲ್ಲಿ ಹೆಜ್ಜೆ ಇರಿಸಿ, ಬಳಿಕ ಭಾರತವನ್ನು ಪ್ರವೇಶಿಸಿದ. ಇದೇ ಹಾದಿಯ ಮೂಲಕ ಕಾರವಾರದತ್ತ ಸಾಗಿದನಂತೆ. ಒಂದು ಮಾಹಿತಿಯ ಪ್ರಕಾರ ಆತ ಮೊದಲು ಹೆಜ್ಜೆ ಇರಿಸಿದ್ದೇ 'ಕಲ್ಪತರು ದ್ವೀಪ'ದಲ್ಲಿ ಎನ್ನಲಾಗುತ್ತದೆ. ಅದು ಜನಪದ ಮೂಲದ ಕಥನವಾಗಿರಬಹುದು. ಆದರೆ, ಉಡುಪಿ ಸನಿಹದ ಕಡಲತೀರಕ್ಕೆ ಬಂದು ಹೋಗಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ತೆಂಗಿನಕಾಯಿಯ ಹೆಸರಿನ ದ್ವೀಪ ಮುಂದಿನ ದಿನಗಳಲ್ಲಿ 'ಸೆಂಟ್ ಮೇರೀಸ್ ಐಲ್ಯಾಂಡ್' ಆಗುವುದರ ಹಿಂದೆಯೂ ವಾಸ್ಕೋ ಡ' ಗಾಮಾನ ಹೆಜ್ಜೆಯ ಪ್ರಭಾವವಿರುವುದನ್ನು ಅಲ್ಲವೆನ್ನುವಂತಿಲ್ಲ. ಅಂತೂ ಉಳ್ಳಾಲ, ಮಂಗಳೂರುಗಳಲ್ಲಿ ಬಂದರು ಪ್ರದೇಶಗಳು ಹೊರಗಿನ ನಾಡು–ದೇಶಗಳ ಜೊತೆಗೆ ಸಂಪರ್ಕ ತಾಣಗಳಾಗಿರುವಂತೆಯೇ ಉಡುಪಿಯಲ್ಲಿ ಮಲ್ಪೆಯ ಕಡಲತೀರದಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದವು.

೧೮೦೦ರ ಸುಮಾರು ದಕ್ಷಿಣಕನ್ನಡದ ಮಟ್ಟಿಗೆ ಪ್ರಮುಖವಾದ ಕಾಲಘಟ್ಟ. ಬಹುಶಃ ಉಡುಪಿಯಲ್ಲಿಯೂ ಸ್ವಾತಂತ್ರ್ಯ ಮನೋಭಾವ ಚಿಗುರಿದ ಸಮಯವದು. ಹೈದರಾಲಿಯ ಬಳಗದಲ್ಲಿ ಧೋಂಡಿಯಾ ವಾಘ್ ಅಂತೊಬ್ಬನಿದ್ದ. ಮುಂದೆ ಟಿಪ್ಪು ಸುಲ್ತಾನನ ಕಾಲದಲ್ಲಿ ತನ್ನ ಹೆಸರನ್ನು ಮಲಿಕ್ ಜಹಾನ್ ಖಾನ್ ಎಂದು ಬದಲಾಯಿಸಿಕೊಂಡ. ಆತ, ಮೈಸೂರಿನಿಂದ ಶಿವಮೊಗ್ಗ ಮೂಲಕ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ ತನ್ನ ಪಾರುಪತ್ಯವನ್ನು ವಿಸ್ತರಿಸಿದ್ದ. ಬೆಳ್ತಂಗಡಿಯ ಜಮಲಾಬಾದ್ ಕೋಟೆ ಅವನ ಅಧೀನದಲ್ಲಿದ್ದು ಮುಂದೆ ಅದನ್ನು ಇಂಗ್ಲಿಷರು ಕೈವಶ ಮಾಡಿಕೊಂಡರು. ಧೋಂಡಿಯಾ ವಾಘ್‌ಗೆ ಉಡುಪಿಯ ಸಂಪರ್ಕವೂ ಇತ್ತು. ಕುಂದಾಪುರದವರೆಗೆ ಅವನ ಒಡೆತನ ಹರಡಿತ್ತು. ಆತನ ವಿರುದ್ಧ

ಇಂಗ್ಲಿಷರು ಕತ್ತಿ ಮಸೆಯುತ್ತಿದ್ದರು. ಹಾಗಾಗಿ, ಉಡುಪಿ – ಕುಂದಾಪುರಗಳಲ್ಲಿ ಸ್ಥಳೀಯರು ಮತ್ತು ಇಂಗ್ಲಿಷರ ನಡುವಿನ ಸಂಘರ್ಷಕ್ಕೆ ಇದು ನೆಪವಾಯಿತು. ಧೋಂಡಿಯಾ ವಾಘ್‌ರಂಥವರು ತಮ್ಮ ಒಡೆತನದ ಉಳಿಸಿಕೊಳ್ಳುವಿಕೆಗೆ ಶ್ರಮಿಸುವವರಲ್ಲದೆ ಇಂಗ್ಲಿಷರ ವಿರುದ್ಧ ಅವರಿಗೆ ರಾಷ್ಟ್ರೀಯಪರ ಧೋರಣೆ ಇತ್ತು ಎಂದು ಹೇಳುವುದು ಕಷ್ಟ. ಬಹುಶಃ ಉಡುಪಿ ಜಿಲ್ಲೆಯಲ್ಲಿ ಇಂಗ್ಲಿಷರ ವಿರುದ್ಧ ಮನೋಸ್ಥಿತಿ ಜಾಗೃತಿಗೊಳ್ಳಲಾರಂಭಿಸಿದ ಮೊದಲದಿನಗಳಿವು ಎಂದು ಗುರುತಿಸಬಹುದು.

ಸಹಜವಾಗಿಯೇ ಇಂಗ್ಲಿಷರ ಜೊತೆಗೆ ಮಂಗಳೂರಿನಷ್ಟು ನೇರ ಸಂಪರ್ಕ ಉಡುಪಿಗೆ ಇರಲಿಲ್ಲ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಎಲ್ಲ ಕಡೆ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಾಗ ಉಡುಪಿಯ ಮಂದಿಯೂ ಅಸಹಕಾರ ಚಳುವಳಿಯನ್ನು ನಡೆಸಿದರು. ೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಆರಂಭದಲ್ಲಿ ರಾಷ್ಟ್ರೀಯ ಪರ ಚಳುವಳಿಗಳ ಜೊತೆಗೆಯೇ ಕ್ರೈಸ್ತಮಿಶನರಿಗಳು ಸಮಾಜಸೇವಾ ಕಾರ್ಯಕ್ರಮಗಳನ್ನು ಮಂಗಳೂರಿನಲ್ಲಿ ಆರಂಭಿಸಿದರು. ೧೮೪೨ರಲ್ಲಿಯೇ ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ್' ಆರಂಭವಾಯಿತು. ಪಂಜೆ ಮಂಗೇಶರಾಯರು ರಾಷ್ಟ್ರೀಯ ಧೋರಣೆಯ ಸಾಹಿತ್ಯವನ್ನು ಬರೆಯಲಾರಂಭಿಸಿದರು. ಕಾರ್ನಾಡು ಸದಾಶಿವರಾಯರು ಹೋಂರೂಲ್ ಚಳುವಳಿಯ ಮುನ್ನೆಲೆಯಲ್ಲಿ ನಿಂತರು. ಮಂಗಳೂರಿನ ಚಟುವಟಿಕೆಗಳು ಉಡುಪಿಯ ಮೇಲೆ ಪ್ರಭಾವ ಬೀರಿದವು. ಸಹಜವಾಗಿಯೇ ಉಡುಪಿಯಲ್ಲಿ ರಾಷ್ಟ್ರಪರ ಚಳುವಳಿಗಳು ತೀವ್ರಗೊಳ್ಳಲಾರಂಭಿಸಿದವು.

## ಅಜ್ಜರಕಾಡಿನ ಬಂಡೆಯ ಮೇಲೆ ನಡೆದ ಸಭೆ

ಅಜ್ಜರಕಾಡು ಉಡುಪಿಯ ಸ್ವಾತಂತ್ರ್ಯ ಹೋರಾಟದ ಸಭೆಗಳಿಗೆ ಆಸರೆಯಾದದ್ದು ಎಂದಿನಿಂದ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಉಡುಪಿಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರಾದ ಡಾ॥ ಆರ್. ಎಸ್. ಶೆಣೈಯವರ ಬರಹದಲ್ಲಿ ಈ ಕುರಿತು ಸುಳಿವು ಸಿಗುತ್ತದೆ.[xi] ಅಜ್ಜರಕಾಡಿನ ಪ್ರದೇಶದಲ್ಲಿ ವಿಚಾರ ಮಂಥನ, ಸಭೆಗಳು ನಡೆಯಲು ಕಾರಣವೇನು ಎಂಬುದಕ್ಕೆ ಉತ್ತರ ಸರಳ. ಅದು ಉಡುಪಿ ಪೇಟೆಯಿಂದ ತುಸು ಅಂತರದಲ್ಲಿತ್ತು. ಎತ್ತರದ ಬಂಡೆಯನ್ನು ವೇದಿಕೆಯಾಗಿ ಬಳಸಿದಾಗ ಮುಂದಿನಿಂದ ಜನ ಸೇರಲು ಬಯಲು ಪ್ರದೇಶವಿತ್ತು. ಸುತ್ತ ಮರಗಳಿದ್ದುದರಿಂದ ಅನಿರೀಕ್ಷಿತವಾಗಿ ದಾಳಿ ಇಡುವ ಪೊಲೀಸರಿಂದ ಪಾರಾಗಲು ಅವಕಾಶವಿತ್ತು.



ಮುಂಬಯಿಯಲ್ಲಿ ಕೆಲಸದಲ್ಲಿದ್ದ ವೈದ್ಯ ಆರ್. ಎಸ್. ಶೆಣೈಯವರು ಉಡುಪಿಗೆ ಬಂದು, ಸ್ವದೇಶಿ ಚಳುವಳಿಯ ಕುರಿತು ಮೊದಲು ಮಾತನಾಡಲಾರಂಭಿಸಿದ್ದು ಅಜ್ಜರಕಾಡಿನ ಬಂಡೆಯ ಮೇಲೆ ಕುಳಿತು! ಆಗ ಅವರೊಂದಿಗೆ ಜತೆಯಾದವರು ಸತ್ಯಮಿತ್ರ ಬಂಗೇರ ಅವರು. ಅವರು ಮಡಿಕೇರಿಯಿಂದ ಉಡುಪಿಗೆ ಬಂದವರು.

ಆರ್. ಎಸ್. ಶೆಣೈಯವರು ಮುಂಬಯಿಯಲ್ಲಿ ಕೆಲಸ ಬಿಡಲು ಕಾರಣವಾದ ಘಟನೆಯೇ ಬಹಳ ಕುತೂಹಲಕರ. ಅವರು ೧೯೦೬ರಲ್ಲಿ ಬೊಂಬಾಯಿಯ ಸರಕಾರಿ ಸೆಂಟ್ರಲ್ ಪ್ರೆಸ್‌ನಲ್ಲಿ ಕೆಲಸಕ್ಕೆ ಸೇರಿದರು. ೧೯೧೧ರಲ್ಲಿ ಅವರಿಗೆ ಅನಾರೋಗ್ಯವಾಗಿ ಸ್ವಂತ ಊರಾದ ಉಡುಪಿಗೆ ಬಂದರು. ಇಲ್ಲಿ ಬೇಗನೆ ಗುಣಮುಖರಾಗದೆ ರಜೆಯನ್ನು ಮುಂದುವರಿಸಬೇಕಾಯಿತು. ಮರಳಿ ಬೊಂಬಾಯಿಗೆ ಹೋಗಿ ಉದ್ಯೋಗಕ್ಕೆ ಸೇರುವಾಗ ಉಡುಪಿಯ ವೈದ್ಯರು ಕೊಟ್ಟ ಸರ್ಟಿಫಿಕೇಟನ್ನು ನೀಡಿದರು. ಅವರ ಮೇಲಧಿಕಾರಿಯಾಗಿದ್ದ ಒಬ್ಬ ಆಂಗ್ಲೋ ಇಂಡಿಯನ್ ಈ ಸರ್ಟಿಫಿಕೇಟನ್ನು ಮಾನ್ಯ ಮಾಡಲಿಲ್ಲ. ಯಾಕೆಂದರೆ, ಇದು ಇಂಡಿಯನ್ ವೈದ್ಯರು ನೀಡಿದ ಸರ್ಟಿಫಿಕೇಟ್ ಆಗಿತ್ತು. ಉಡುಪಿಯಲ್ಲಿ ಆ ವೇಳೆಗೆ ಆಂಗ್ಲ ವೈದ್ಯರು ಇರಲಿಲ್ಲ. ಮೇಲಧಿಕಾರಿ, 'ಇಂಡಿಯನ್ಸ್ ಆರ್ ರೋಗ್ಸ್! ನಾನು ಈ ಸರ್ಟಿಫಿಕೇಟನ್ನು ಮಾನ್ಯ ಮಾಡುವುದಿಲ್ಲ' ಎಂದು ಕೆಟ್ಟದಾಗಿ ಬೈದುಬಿಟ್ಟ. ಎಸ್. ಆರ್. ಶೆಣೈಯವರು ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು, ಬೊಂಬಾಯಿಯನ್ನೂ ತೊರೆದು ಉಡುಪಿಗೆ ಬಂದರು. ಆಗ ಅವರಿಗೆ ಹತ್ತೊಂಬತ್ತು ವರ್ಷ ಪ್ರಾಯ. ಬೊಂಬಾಯಿಯಲ್ಲಿ ರಾಜಕೀಯ ಘಟನೆಗಳನ್ನು ಹತ್ತಿರದಿಂದ ಕಂಡವರು. ಲೋಕಮಾನ್ಯ ತಿಲಕರ ಅನುಯಾಯಿಯಾಗಿದ್ದ ಅವರು ತಿಲಕರ ಮರಾಠಿ ವಾರಪತ್ರಿಕೆ ಕೇಸರಿ, ಪೂನಾದ ಕಾಳ, ಭಾಲಾ, ಚಿತ್ರಮಯ ಜಗತ್ ಮುಂತಾದ ಪತ್ರಿಕೆಗಳನ್ನು ಓದುತ್ತಿದ್ದವರು. ಅಲ್ಲದೆ, ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಅವರ ಆನಂದಮಠ, ದೇವೀ ಚಾಧುರಾಣಿ, ವಿಷವೃಕ್ಷ, ಕಪಾಲಕುಂಡಲ, ಸೀತಾರಾಮ ಇತ್ಯಾದಿ ಕಾದಂಬರಿಗಳ ಕನ್ನಡ ಅನುವಾದಗಳನ್ನು ಕೂಡ ಓದುತ್ತಿದ್ದರು. ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ಬಾಲಗಂಗಾಧರ

ತಿಲಕ್, ಬಿಪಿನ್‌ಚಂದ್ರ ಪಾಲ್, ವಿನಾಯಕ ದಾಮೋದರ ಸಾವರ್ಕರ್, ಸುರೇಂದ್ರನಾಥ ಬ್ಯಾನರ್ಜಿ, ಫಿರೋಜ್ ಶಾ ಮೆಹತಾ, ಮಹಮದ್ ಆಲಿ ಜಿನ್ನಾ ಮುಂತಾದವರ ಭಾಷಣಗಳನ್ನು ಕೇಳುತ್ತಿದ್ದವರು. ೧೯೦೭ರಲ್ಲಿ ಲೋಕಮಾನ್ಯ ತಿಲಕರಿಗೆ ರಾಜದ್ರೋಹದ ಪ್ರಕರಣದ ಮೇಲೆ ಆರು ವರ್ಷ ಜೈಲುವಾಸ ಮತ್ತು ಒಂದು ಸಾವಿರ ರೂಪಾಯಿಗಳ ದಂಡವನ್ನು ವಿಧಿಸಲಾಯಿತು. ವೀರ ಸಾವರ್ಕರ್ ಅವರು ನಾಸಿಕ್‌ನ ಅಧಿಕಾರಿಯನ್ನು ಕೊಲೆ ಮಾಡಿದ ಅರೋಪದಲ್ಲಿ ಬ್ರಿಟಿಷರಿಂದ ಬಂಧನಕ್ಕೊಳಗಾಗಿ ಸಮುದ್ರಮಾರ್ಗದಲ್ಲಿ ಸಾಗುತ್ತಿರುವಾಗ ಸ್ನಾನಗೃಹದ ಕಿಟಕಿಯ ಮೂಲಕ ಸಮುದ್ರಕ್ಕೆ ಹಾರಿ ತಪ್ಪಿಸಿಕೊಂಡಿದ್ದು, ಬಳಿಕ ಅವರಿಗೆ ಅಂಡಮಾನ್ ಜೈಲಿನಲ್ಲಿ ಶಿಕ್ಷೆಯಾಗಿತ್ತು. ಇವೆರಡೂ ಘಟನೆಗಳನ್ನು ಆರ್. ಎಸ್. ಶೆಣೈ ಬಹಳ ನಿಕಟವಾಗಿ ಕಂಡಿದ್ದರು, ಕೇಳಿದ್ದರು. ಬೊಂಬಾಯಿಯಿಂದ ಉಡುಪಿಗೆ ಮರಳಿ ಬರುವಾಗ ಪರಕೀಯರ ವಿರುದ್ಧ ಹೇಗೆ ಯುದ್ಧ ಸಾರುವುದು ಎಂಬ ವಿಚಾರವೇ ಅವರ ತಲೆಯಲ್ಲಿ ತುಂಬಿತ್ತು.

೧೯೧೬ರಲ್ಲಿ ಆ್ಯನಿಬೆಸೆಂಟ್ ಹೋಂರೂಲ್ ಚಳುವಳಿಯನ್ನು ಆರಂಭಿಸಿದರು. ಅದರಿಂದ ಪ್ರೇರಿತರಾದ ಎಸ್. ಆರ್. ಶೆಣೈ ಸಮಾನ ಮನಸ್ಕರೊಂದಿಗೆ ಸೇರಿಕೊಂಡು ಹೈಸ್ಕೂಲ್ ಹುಡುಗರನ್ನು ಸೇರಿಸಿ 'ಸ್ಟೂಡೆಂಟ್ಸ್ ಬ್ರದರ್ ಹುಡ್' ಎಂಬ ಸಂಘಟನೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯು ದೇಶಪ್ರೇಮದ ವಿಚಾರದ ಕುರಿತ ಭಾಷಣಗಳನ್ನು, ಸಭೆಗಳನ್ನು ಆಯೋಜಿಸುತ್ತಿತ್ತು. ಮಂಗಳೂರಿನ ಪ್ರಸಿದ್ಧ ಹರಿಕಥಾದಾಸ ರಾಘವೇಂದ್ರಾಚಾರ್ ಅವರನ್ನು ಉಡುಪಿಗೆ ಕರೆಸಿ ಹರಿಕಥಾಕಾಲಕ್ಷೇಪವನ್ನು ಆಯೋಜಿಸುತ್ತಿತ್ತು. ಇಂಥ ಹರಿಕಥೆಗಳಲ್ಲಿ ಸ್ವದೇಶಿ ವಿಚಾರಗಳನ್ನೇ ಪರೋಕ್ಷವಾಗಿ ಪ್ರತಿಪಾದಿಸಲಾಗುತ್ತಿತ್ತು. ಮುಂದೆ ಯಾವ ಬಗೆಯಲ್ಲಿ ಕ್ರಿಯಾಶೀಲನಾಗಿ ಶ್ರಮಿಸುವುದು ಎಂದು ಯೋಚಿಸುತ್ತಿರುವಾಗಲೇ ಸತ್ಯಮಿತ್ರ ಬಂಗೇರ ಜೊತೆಯಾದರು. ಅವರು ಪ್ರಾಟೆಸ್ಟಂಟ್ ಮತದವರು. ಕೊಡಗಿನಲ್ಲಿ ಕೆಲ ಕಾಲ ಇದ್ದು ಅಲ್ಲಿ ಜರ್ಮನ್ ಬಾಸೆಲ್ ಮಿಶನ್‌ನ ವಿರುದ್ಧ ಚಳುವಳಿ ಸಾರಿದವರು. ಅವರನ್ನು ಕೊಡಗಿನಿಂದ ಗಡಿಪಾರು ಮಾಡಲಾಯಿತು. ಉಡುಪಿಗೆ ಮರಳಿದರು. ಒಂದು ಸಂಜೆ ಇಬ್ಬರೂ ಅಜ್ಜರಕಾಡಿನ ಎತ್ತರದ ಬಂಡೆಯ ಮೇಲೆ ಕುಳಿತು ಸುಖ-ಕಷ್ಟ ಮಾತನಾಡತೊಡಗಿದರು. ೧೯೨೦ರ ಆಸುಪಾಸಿನ ಒಂದು ದಿನ. ಎಪ್ರಿಲ್ ೭



ಇರಬೇಕು. ಜಲಿಯನ್ ವಾಲಾಬಾಗ್ ಹತ್ಯಾಕಾಂಡವಾದ ಮರುವರ್ಷ. ಬಲಿಯಾದವರ ಸಂಸ್ಮರಣೆಯ ಸಮಾರಂಭವನ್ನು ಅಜ್ಜರಕಾಡಿನಲ್ಲಿ ಆಯೋಜಿಸಲು ಇಬ್ಬರೂ ನಿರ್ಧರಿಸಿದರು. ಜನರ ಮನವೊಲಿಸಿ ಸಭೆಗೆ ಆಗಮಿಸುವಂತೆ ಆಹ್ವಾನಿಸಿದರು. ಆ ಸಂಜೆ ಅಜ್ಜರಕಾಡಿನಲ್ಲಿ ಸುಮಾರು ನೂರು ಮಂದಿ ನೆರೆದರು. ಎಸ್. ಆರ್. ಶೆಣೈ ಮತ್ತು ಸತ್ಯಮಿತ್ರ ಬಂಗೇರ ಇಬ್ಬರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪರಕೀಯರ ವಿರುದ್ಧ ಸಮರ ಸಾರುವ ಅಗತ್ಯವನ್ನು ಜನರಿಗೆ ವಿವರಿಸಿದರು. ಅವರಿಬ್ಬರೂ ಬೊಂಬಾಯಿ ಮತ್ತು ಕೊಡಗಿನಲ್ಲಿ ತಮಗಾದ ಅನುಭವವನ್ನು ವಿವರಿಸುತ್ತಿದ್ದಂತೆ ಕತ್ತಲು ಆವರಿಸತೊಡಗಿತು. ಮರುದಿನ ಮತ್ತೆ ಸೇರುವ ಆಶಯದೊಂದಿಗೆ ಎಲ್ಲರೂ ಮನೆಗೆ ತೆರಳಿದರು.

ಅಜ್ಜರಕಾಡಿನಲ್ಲಿ ಆರ್. ಎಸ್. ಶೆಣೈ ಮತ್ತು ಸತ್ಯಮಿತ್ರ ಬಂಗೇರ ಅವರ ಮೊದಲ ದಿನದ ಭಾಷಣ ಊರಲ್ಲೆಲ್ಲ ಸುದ್ದಿಯಾಗಿತ್ತು. ಮರುದಿನ ಸಂಜೆ ಅಜ್ಜರಕಾಡಿನಲ್ಲಿ ನೂರಾರು ಸಂಖ್ಯೆ ಜನ ನೆರೆದಿದ್ದರು. ಮತ್ತೆ ಅವರಿಬ್ಬರು ಭಾಷಣ ಮಾಡಿದರು. ಮಾತುಗಳಿಗೆ ಸೀಮಿತವಾಗಿದ್ದ ವಿಚಾರಗಳು ಕಾರ್ಯರೂಪಕ್ಕೆ ಬಂದವು. ಮೆರವಣಿಗೆಗಳನ್ನು ಆಯೋಜಿಸತೊಡಗಿದರು. ಶಾಲೆಯನ್ನು ತೊರೆದು ವಿದ್ಯಾರ್ಥಿಗಳು ಹೊರಬಂದರು. ಬೋರ್ಡ್ ಹೈಸ್ಕೂಲ್, ಕ್ರಿಶ್ಚಿಯನ್ ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳು ಗೈರು ಹಾಜರಾಗಿ ಚಳುವಳಿಯ ಚಟುವಟಿಕೆಗಳಲ್ಲಿ ತೊಡಗಿದರು. ವಿದ್ಯಾರ್ಥಿಗಳು ಉಡುಪಿಯ ಮುನ್ಸಿಫ್ ಕೋರ್ಟಿಗೆ ಘೇರಾವ್ ಹಾಕಿದರು. ಕೋರ್ಟು ಕಲಾಪಗಳು ನಡೆಯಲು ಕಷ್ಟವಾಯಿತು. ವಕೀಲರು ನ್ಯಾಯಾಲಯದಿಂದ ಹೊರಬಂದರು. ಅದೇ ದಿನ ಸಾಯಂಕಾಲ ಅಜ್ಜರಕಾಡಿನಲ್ಲಿ ಎಂದಿನಂತೆ ಸಭೆ ನಡೆಯಿತು. ಕುಬೇರ ಪಾಂಡುರಂಗ ರಾವ್ ಎಂಬ ಪ್ರಸಿದ್ಧ ವಕೀಲರು ತಮ್ಮ ವಕೀಲಿ ವೃತ್ತಿಯ ಕಾಗದ ಪತ್ರಗಳನ್ನು ಹರಿದು ಹಾಕಿ ತಾನು ಕೋರ್ಟಿಗೆ ಹೋಗುವುದಿಲ್ಲ ಎಂದು ಘೋಷಿಸಿದರು. ನೆರೆದ ಸಭೆ ಕುಬೇರ ಪಾಂಡುರಂಗ ರಾವ್ ಅವರನ್ನು ಚಳುವಳಿಗೆ ಸ್ವಾಗತಿಸಿತು.

೧೯೨೧ರ ಸುಮಾರಿಗೆ ಅಜ್ಜರಕಾಡು ಚಿಂತನ-ಮಂಥನದ ಕೇಂದ್ರ ಸ್ಥಾನವಾಯಿತು. ಪ್ರತಿದಿನವೆಂಬಂತೆ ಸಭೆಗಳು ಜರಗಿದವು. ಅಜ್ಜರಕಾಡಿನ ಸನಿಹದಲ್ಲಿಯೇ 'ಮುಕುಂದ ನಿವಾಸ' ಇತ್ತು. ಅದು ತೋನ್ಸೆ ಮುಕುಂದ

ಪೈಗಳ ಮನೆ. ಅವರು ಪ್ರಸಿದ್ಧ ವಕೀಲರೂ ಆಗಿದ್ದರು. ಅಜ್ಜರಕಾಡು ಬಿಟ್ಟರೆ ಆ ಪರಿಸರದಲ್ಲಿ ಸಭೆ ನಡೆಸುವ ಮತ್ತೊಂದು ಸ್ಥಳವೆಂದರೆ 'ಮುಕುಂದ ನಿವಾಸ'. ಮುಕುಂದ ನಿವಾಸದಲ್ಲಿ ಕಾಂಗ್ರೆಸ್ ಸಭೆ ಮಾತ್ರವಲ್ಲ, ಹರಿಕಥೆಗಳು ಆಯೋಜನೆಗೊಳ್ಳುತ್ತಿದ್ದವು, ತಾತ್ಕಾಲಿಕ ಶಾಲೆಗಳನ್ನು, ನೂಲುವ ಸ್ಪರ್ಧೆಗಳನ್ನು ನಡೆಸಲಾಗುತ್ತಿತ್ತು. ಬಹುಶಃ ದಕ್ಷಿಣಕನ್ನಡ ಜಿಲ್ಲೆಯ ಮೊದಲ ಕಾಂಗ್ರೆಸ್ ಕಮಿಟಿಯ ಸಭೆ ನಡೆದದ್ದು ಅಲ್ಲಿಯೇ. ಉಡುಪಿಯ ಪ್ರಸಿದ್ಧ ಜವುಳಿ ವ್ಯಾಪಾರಸ್ಥರಾದ ಸೇಟ್‌ನಾನಾಲಾಲ್ ಗೋವಿಂದ್‌ಜೀ ಅವರನ್ನು ಕಮಿಟಿಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ನಯಂಪಳ್ಳಿ ಆನಂದ ರಾವ್ ಕಾರ್ಯದರ್ಶಿಯಾದರೆ ಕುಬೇರ ಪಾಂಡುರಂಗ ರಾವ್ ಕಾರ್ಯದರ್ಶಿಯಾದರು. ಅಷ್ಟರಲ್ಲಿ ಮಂಗಳೂರಿನಲ್ಲಿ ಕಾಲೇಜು ತೊರೆದು ಬಂದಿದ್ದ ಹಿರಿಯಡಕ ರಾಮರಾಯ ಮಲ್ಯ ಅವರ ಜೊತೆಗೆ ಎಚ್. ನಾರಾಯಣ ರಾವ್, ಯು. ಶಾಂತಾರಾಮ್ ರಾವ್ ಕಾಂಗ್ರೆಸ್‌ನ ಕಾರ್ಯಗಳಲ್ಲಿ ಕೈ ಜೋಡಿಸಿದರು. ಆಗಸ್ಟ್ ತಿಂಗಳ ೧ನೆಯ ತಾರೀಕು ಲೋಕಮಾನ್ಯ ತಿಲಕರ ಸ್ಮೃತಿ ದಿನಾಚರಣೆ ನಡೆದದ್ದು ಮುಕುಂದ ನಿವಾಸದಲ್ಲಿಯೇ. ದೇಶಸೇವೆಗಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ತಿಲಕರ ಸಂಕಷ್ಟದ ಜೀವನಕಥನವನ್ನು ಸಭೆಯ ಮುಂದೆ ವಿವರಿಸುವಾಗ ಜನರ ಕಣ್ಣುಗಳು ಆರ್ದ್ರಗೊಂಡವು. ಆ ಸಭೆಗೆ ದಕ್ಷಿಣಕನ್ನಡದ ಗಾಂಧಿ ಎನಿಸಿದ್ದ ಕಾರ್ನಾಡು ಸದಾಶಿವ ರಾಯರು ಬಂದಿದ್ದರು. ದಕ್ಷಿಣಕನ್ನಡ ಜಿಲ್ಲೆಗೆ ಮಂಗಳೂರು ಕೇಂದ್ರವಾಗಿರುವುದರಿಂದ ಕಾಂಗ್ರೆಸ್ ಕಮಿಟಿಯನ್ನು ಅಲ್ಲಿಯೇ ಸ್ಥಾಪಿಸುವುದು ಉತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ನಾಡು ಸದಾಶಿವ ರಾಯರ ಮಾತಿಗೆ ಸಮ್ಮತಿಸಿದ ಉಡುಪಿಯ ಮಂದಿ ಉಡುಪಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕೈಬಿಡಲು ಸಿದ್ಧರಾದರು. ಉಡುಪಿಯಲ್ಲಿ ತಾಲ್ಲೂಕು ಮಟ್ಟದ ಕಾಂಗ್ರೆಸ್ ಕಮಿಟಿಯನ್ನು ಊರ್ಜಿತಕ್ಕೆ ತರಲಾಯಿತು.

೧೯೨೩ರಲ್ಲಿ ಸ್ವಾತಂತ್ರ್ಯ ಹೋರಾಟದ ಗತಿ ಇನ್ನಷ್ಟು ತೀವ್ರಗೊಂಡಿತು. ಪೆರ್ಡೂರಿನ ಸಾಂತ್ಯಾರು ಅನಂತಪದ್ಮನಾಭ ಭಟ್ಟರು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದರು. ಪಣಿಯಾಡಿ ಶ್ರೀನಿವಾಸ ಉಪಾಧ್ಯರು ಕಾರ್ಯದರ್ಶಿಯಾದರು. ಹಿರಿಯಡಕ ರಾಮರಾಯ ಮಲ್ಯ ಅವರು 'ಸತ್ಯಾಗ್ರಹಿ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಅದು ಮಹಾತ್ಮ ಗಾಂಧಿಯವರ 'ಯಂಗ್ ಇಂಡಿಯಾ' ಮಾದರಿಯದ್ದು. ಅದು ರಾಜಕೀಯ ವಿಚಾರಗಳನ್ನು ಒಳಗೊಂಡಿದ್ದ



ಕಾರಣಕ್ಕೆ ಯಾವುದೇ ಪ್ರೆಸ್‌ನವರು ಅದನ್ನು ಮುದ್ರಿಸಲು ಮುಂದೆ ಬರಲಿಲ್ಲ. ಆಗ, ಹಿರಿಯಡಕ ರಾಮರಾಯ ಮಲ್ಯ ಅವರೇ ಗೆಳೆಯರೊಂದಿಗೆ ಸೇರಿಕೊಂಡು, 'ಸತ್ಯಾಗ್ರಹಿ ಪ್ರೆಸ್'ನ್ನು ಆರಂಭಿಸಿದರು. ಈ ಪತ್ರಿಕೆಯಲ್ಲಿ 'ಯಂಗ್ ಇಂಡಿಯ'ದ ಲೇಖನಗಳು ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾಗುತ್ತಿದ್ದವು. ಉಡುಪಿಯ ಕಾಂಗ್ರೆಸ್ ಕಾರ್ಯಕರ್ತರು ಮುಂದುವರಿದು ಒಂದು ರಾಜಕೀಯ ಪರಿಷತ್ತನ್ನು ಆರಂಭಿಸಲು ಮುಂದಾದರು. ಅದರ ಅಧ್ಯಕ್ಷರಾಗಿ ಸಾಂತ್ಯಾರು ಅನಂತಪದ್ಮನಾಭ ಭಟ್ಟರೇ ಇದ್ದರು. ಎಸ್. ಯು. ಪಣಿಯಾಡಿ, ನಯಂಪಳ್ಳಿ ಆನಂದರಾವ್, ಕೊಚ್ಚಿಕಾರ ಪಾಂಡುರಂಗ ಪೈ, ಹಿರಿಯಡಕ ರಾಮರಾಯ ಮಲ್ಯ, ಪಾಂಗಾಳ ಮಂಜುನಾಥ ನಾಯಕ್, ಮಲ್ಪೆ ವಾಮನ ಭಟ್ ಮೊದಲಾದವರು ಈ ಪರಿಷತ್ತಿನಲ್ಲಿ ಸಕ್ರಿಯರಾಗಿದ್ದರು. ಪ್ರಭಾಕರ ಪ್ರೆಸ್‌ನ ಮುಂಭಾಗದಲ್ಲಿ ಜಿಲ್ಲಾಪರಿಷತ್ತಿನ ಮೊದಲ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಧಾರವಾಡ ರಂಗನಾಥ ರ. ದಿವಾಕರ ಅಧ್ಯಕ್ಷತೆ ವಹಿಸಲು ಆಗಮಿಸಿದ್ದರು. ಈ ಸಂದರ್ಭದಲ್ಲಿ ಪ್ರದರ್ಶನಕ್ಕೆಂದು ಆರ್. ಎಸ್. ಶೆಣೈಯವರು ಒಂದು ನಾಟಕವನ್ನು ಬರೆದಿದ್ದರು. 'ಭಾರತೋದಯ' ಎಂಬುದು ಅದರ ಶೀರ್ಷಿಕೆ. ಪೂರ್ಣ ರಾಜಕೀಯ ಕಥಾನಕವಿದು. ಲೋಕಮಾನ್ಯ ತಿಲಕ್, ಮಹಾತ್ಮ ಗಾಂಧೀಜಿ, ಮಹಮ್ಮದಾಲಿ, ಲಾಲಾಲಜಪತರಾಯ್ ಮುಂತಾದವರು ಅದರ ಪಾತ್ರಗಳು. ಆಗ ಉಡುಪಿಯಲ್ಲಿ ಗುಬ್ಬಿ ಕಂಪೆನಿಯ ಥಿಯೇಟರ್‌ನ ಮೊಕ್ಕಾಂ ಇತ್ತು. ಅಲ್ಲಿ ಈ ನಾಟಕವನ್ನು ಪ್ರದರ್ಶಿಸುವುದೆಂದು ನಿರ್ಧರಿಸಲಾಯಿತು. ನಾಟಕವನ್ನು ನೋಡಲು ದಕ್ಷಿಣಕನ್ನಡದ ಎಲ್ಲೆಡೆಯಿಂದ ಜನ ಆಗಮಿಸಿದ್ದರು. ಸುಮಾರು ೨೦೦ ಮಂದಿ ನೆರೆದಿದ್ದರು. ಆದರೆ, ಪೊಲೀಸರು ನಾಟಕವಾಡದಂತೆ ಸಂಘಟಕರನ್ನು ತಡೆದರು. ಕುಂದಾಪುರದ ಫರ್ಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರು ಉಡುಪಿಗೆ ಆಗಮಿಸಿ ಪೊಲೀಸ್ ಪಡೆಯನ್ನು ತರಿಸಿ ಥಿಯೇಟರ್‌ನ ಸುತ್ತ ಕಾವಲಿರಿಸಿದರು. ನಾಟಕವಾಡುವ ಪಾತ್ರಧಾರಿಗಳ ಹೆಸರನ್ನು ಸಂಗ್ರಹಿಸಿದರು. ಹನ್ನೊಂದು ಮಂದಿಯ ಮೇಲೆ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ ೧೪೪ರಂತೆ ನೋಟಿಸ್ ಜಾರಿ ಮಾಡಿದರು. ಜನರು ಅಸಮಾಧಾನಗೊಂಡರು. ಸಂಘರ್ಷ ನಡೆಯುವುದರಲ್ಲಿತ್ತು. ರಂಗನಾಥ ದಿವಾಕರ ಅವರು ಮಧ್ಯ ಪ್ರವೇಶಿಸಿ ನಮ್ಮನ್ನು ನಾಟಕವಾಡದಂತೆ ಮನವೊಲಿಸಿದರು. ಆ ಮೂಲಕ ಸಂಭವನೀಯ ಗೋಲಿಬಾರ್, ಹಿಂಸಾಕಾಂಡವನ್ನು ತಪ್ಪಿಸಿದರು. ಆಮೇಲೆ, ಆರ್. ಎಸ್.

ಶೆಣೈಯವರು ಆ ನಾಟಕದ ಯೋಚನೆಯನ್ನು ಕೈಬಿಟ್ಟು ಎಸ್. ಯು. ಪಣಿಯಾಡಿಯವರೊಂದಿಗೆ ಸೇರಿಕೊಂಡು ಸ್ವದೇಶಿ ಧೋರಣೆಯ ಬೇರೆ ನಾಟಕಗಳನ್ನು ಆಡಿದರು.

ಉಡುಪಿಯಲ್ಲಿ ಸ್ವದೇಶಿ ಚಳುವಳಿ ಇನ್ನಷ್ಟು ತೀವ್ರಗೊಂಡು ಕುಂದಾಪುರ, ಕಾರ್ಕಳಗಳಿಗೂ ಹರಡಿತು. ೧೯೩೦ರವರೆಗೂ ಅಲ್ಲಲ್ಲಿ ಪ್ರಮುಖ ವಿದ್ಯಮಾನಗಳು ಜರುಗಿದವು. ಕುಂದಾಪುರದಲ್ಲಿ ಕಾಂಗ್ರೆಸ್‌ನ ಪರಿಪತ್ತಿನ ಸಭೆ ನಡೆಯಿತು. ಒಂದೆಡೆ ಜನಜಾಗೃತಿ ಅಧಿಕಗೊಳ್ಳುತ್ತಿದ್ದಂತೆಯೇ ಮತ್ತೊಂದೆಡೆ ಪೊಲೀಸರಿಂದ ಚಳುವಳಿಗಳನ್ನು ಹತ್ತಿಕ್ಕುವ ಕೆಲಸಗಳು ನಡೆದವು. ಕಾಂಗ್ರೆಸ್ ಕಚೇರಿಯೊಳಗೆ ನುಗ್ಗಿ ಪುಸ್ತಕಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಗಳನ್ನು ಜರಗಿದವು. ಗಾಂಧೀಜಿಯವರ ಕರೆಗೆ ಓಗೊಟ್ಟು ಚರಕದಲ್ಲಿ ನೂಲುವ ಕಾರ್ಯಕ್ರಮಗಳು ಅಧಿಕಗೊಂಡವು. ೧೯೩೦ರ ಸುಮಾರಿಗೆ ಎಸ್. ಯು. ಪಣಿಯಾಡಿಯವರ ನೇತೃತ್ವದಲ್ಲಿ ಉಡುಪಿಯಿಂದ ಮಂಗಳೂರಿನತ್ತ ಉಪ್ಪಿನ ಸತ್ಯಾಗ್ರಹದ ಮೆರವಣಿಗೆ ನಡೆಯಿತು. ಕಾಲ್ನಡಿಗೆಯ ಮೆರವಣಿಗೆಯನ್ನು ಸುತ್ತಮುತ್ತಲಿನ ಊರುಗಳ ಜನ ಹಾರ್ದವಾಗಿ ಸ್ವಾಗತಿಸಿ ಬೀಳ್ಕೊಟ್ಟರು. ಮಂಗಳೂರು ತಲುಪುತ್ತಿದ್ದಂತೆಯೇ ಪೊಲೀಸರು ಎಸ್. ಯು. ಪಣಿಯಾಡಿಯವರನ್ನು ಬಂಧಿಸಿದರು. ೧೯೩೦ರ ಎಪ್ರಿಲ್ ೩೦ರಂದು ದೇಶಭಕ್ತ ಕಾರ್ನಾಡ್ ಸದಾಶಿವರಾಯರೊಡನೆ ಎಸ್. ಯು. ಪಣಿಯಾಡಿ ಅವರಿಗೂ ಹದಿನೈದು ತಿಂಗಳ ಜೈಲುವಾಸವನ್ನು ವಿಧಿಸಲಾಯಿತು. ಈ ಸುದ್ದಿ ಉಡುಪಿಯಲ್ಲಿ ಸಂಚಲನ ಮೂಡಿಸಿತು. ಅಜ್ಜರಕಾಡು, ರಥಬೀದಿ ಪ್ರದೇಶಗಳಲ್ಲಿ ಸಭೆ ನಡೆಯಿತು. ಉಡುಪಿಯಲ್ಲಿ ಅಂಗಡಿ, ಮುಂಗಟ್ಟುಗಳನ್ನು ಮುಚ್ಚಿ ಪ್ರತಿಭಟನೆ ನಡೆಸಲಾಯಿತು. ಅದೇ ದಿನ ಸಂಜೆಯೇ ಎಲ್ಲರೂ ಸೇರಿ ಚಳುವಳಿಯನ್ನು ತೀವ್ರಗೊಳಿಸುವ ನಿರ್ಧಾರವನ್ನು ಕೈಗೊಂಡರು.

ಅಜ್ಜರಕಾಡಿನಿಂದ ಮೆರವಣಿಗೆಯಲ್ಲಿ ಹೊರಟು ರಥಬೀದಿಯ ಮೂಲಕ ಮಲ್ಪೆಗೆ ಹೋಗಿ ವಡಭಾಂಡೇಶ್ವರದಲ್ಲಿ ಉಪ್ಪಿನ ಸತ್ಯಾಗ್ರಹ ಕೈಗೊಳ್ಳುವ ನಿರ್ಧಾರ ತಳೆಯಲಾಯಿತು. ವಡಭಾಂಡೇಶ್ವರದ ತೀರದಲ್ಲಿ ಉಪ್ಪು ತಯಾರಿಸುವ ಪ್ರಕ್ರಿಯೆ ಆರಂಭವಾಯಿತು. ಅಲ್ಲಿಂದ ಮುಂದುವರಿದು ಮದ್ಯಪಾನ ವಿರೋಧಿ ಚಳುವಳಿಗೆ ಆರಂಭಗೊಂಡಿತು. ಸತ್ಯಾಗ್ರಹಿಗಳಿಗಾಗಿಯೇ ಶಿಬಿರಗಳು ಆಯೋಜನೆಗೊಂಡವು. ಶಿಬಿರದಲ್ಲಿ ಆಸರೆ ಪಡೆದವರಿಗೆ ಊರಿನ ಮಂದಿ ಆಹಾರವನ್ನು ಪೂರೈಸಿದರು.



ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಸಾಂತ್ಯಾರು ಅನಂತಪದ್ಮನಾಭ ಭಟ್, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ , ಪಾಂಗಾಳ ಮಂಜುನಾಥ ನಾಯಕ್, ಪಾಂಗಾಳ ಉಪೇಂದ್ರ ನಾಯಕ್, ಪಾಂಗಾಳ ಮನೋರಮಾ ನಾಯಕ್, ಮಲ್ಪೆ ಅಂಬಾಬಾಯಿ ಮುಂತಾದವರನ್ನು ಪೊಲೀಸರು ಬಂಧಿಸಿದರು.

ಎಸ್. ಆರ್. ಶೆಣೈ ಅವರು ತಾವು ಬಂಧಿತರಾಗಿ ಜೈಲಿಗೆ ಹೋಗುವ ಸಂದರ್ಭದ ತಮ್ಮ ಸಂಕಷ್ಟದ ಅನುಭವಗಳನ್ನು ವರ್ಣಿಸುವುದು ಹೀಗೆ : ೧೯೩೦ನೆಯ ಜೂನ್ ೨೩ನೆಯ ದಿವಸ ರಾತ್ರಿ ೧೦ ಗಂಟೆ ಸುಮಾರಿಗೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಸಂಜೀವ ರಾಯರು ನಮ್ಮ ಮನೆಗೆ ಬಂದು ನನ್ನನ್ನು ಭೇಟಿಯಾದರು. ನನ್ನ ಯೋಗಕ್ಷೇಮವನ್ನೆಲ್ಲ ವಿಚಾರಿಸಿ ಕೊನೆಗೆ ಬಂಧಿಸುವ ವಿಚಾರವನ್ನು ತಿಳಿಸಿದರು. ನನ್ನ ಕೈಗೆ ನೋಟೀಸನ್ನು ನೀಡಿ ಅದಕ್ಕೆ ದಸ್ಕತ್ತು ಹಾಕುವಂತೆ ಸೂಚಿಸಿದರು. ಮರುದಿನ ಬೆಳಗ್ಗೆ ೮ ಗಂಟೆಗೆ ಬಂದು ನನ್ನನ್ನು ಕುಂದಾಪುರಕ್ಕೆ ವಿಚಾರಣೆಗೆ ಕರೆದುಕೊಂಡು ಹೋಗುವುದಾಗಿಯೂ ನಾನು ನನ್ನ ಮನೆಯ ಮುಂದಿನ ವ್ಯವಸ್ಥೆಯನ್ನು ನೋಡಿಕೊಳ್ಳುವುದಾಗಿಯೂ ತಿಳಿಸಿ ಹೊರಟುಹೋದರು. ಅನಚಿತರ, ನಾನು ನನ್ನ ಮನೆಯಲ್ಲಿರುವ ನನ್ನ ಪತ್ನಿ ಮತ್ತು ಅಕ್ಕನವರನ್ನು ಸಮಜಾಯಿಸಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ನಾನು ಹೋರಾಡುತ್ತಿರುವಾಗ ನನ್ನವರಾದ ನೀವೂ ಕಷ್ಟಪಡುವುದರಲ್ಲಿ, ಸುಖದುಃಖದಲ್ಲಿ ಪಾಲುದಾರರಾಗಬೇಕೆಂದು ಹೇಳಿದೆ. ಅವರು ಒಪ್ಪಿಕೊಂಡರು. ನಾನು ಸೆರೆಮನೆಗೆ ಹೋಗುವಾಗ ಮನೆಯಲ್ಲಿ ಗಂಡಸರಾರೂ ಇಲ್ಲದೆ, ಇಬ್ಬರು ಹೆಂಗಸರನ್ನು ಮಾತ್ರವೇ ಬಿಟ್ಟುಹೋಗುವುದು ನನ್ನ ಪಾಲಿಗೆ ಕಷ್ಟದ ಕೆಲಸವಾಗಿತ್ತು. ಬೇರೆ ಸಂಬಂಧಿಕರ ಮನೆಗೆ ಕಳುಹಿಸುವ ಹಾಗೂ ಇರಲಿಲ್ಲ. ಕೊನೆಗೆ ನೆರೆಕರೆಯವರು ಸಹಕರಿಸುವ ಧೈರ್ಯ ತುಂಬಿದರು.

ಎಸ್. ಆರ್. ಶೆಣೈಯವರನ್ನು ಕಣ್ಣಾನೂರು ಜೈಲಿಗೆ ಕೊಂಡೊಯ್ಯಲಾಗಿತ್ತು. ಅಲ್ಲಿನ ಸಂಕಷ್ಟಗಳನ್ನು ಅವರು ವಿವರವಾಗಿ ಹೇಳಿಕೊಂಡಿದ್ದಾರೆ. ಉಡುಪಿಯ ಅನೇಕ ಮಂದಿ ಸ್ವಾತಂತ್ರ್ಯ ಯೋಧರು ಬೇರೆ ಬೇರೆಡೆಯ ಜೈಲಿಗೆ ಕಳುಹಿಸಲ್ಪಟ್ಟು ಹೀನಾಯವಾದ ಸ್ಥಿತಿಯಲ್ಲಿ ದಿನಗಳೆದದ್ದಿದೆ. ಕ್ಷಮೆ ಬೇಡಿದರೆ ಜೈಲಿನಿಂದ ಬಿಡುಗಡೆ ದೊರೆಯುತ್ತಿತ್ತು. ಆದರೆ, ಆತ್ಮಸಾಕ್ಷಿಗೆ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟಗಾರರು ಪೊಲೀಸರಿಂದ ಕ್ಷಮೆ ಬೇಡಲು ಸಿದ್ಧರಿರಲಿಲ್ಲ.

## ಗಾಂಧೀಜಿ ಉಡುಪಿಗೆ ಬಂದದ್ದು ಒಂದೇ ಸಲ

ದಕ್ಷಿಣಕನ್ನಡಕ್ಕೆ ಗಾಂಧೀಜಿ ಮೂರು ಸಲ ಭೇಟಿ ಕೊಟ್ಟಿದ್ದರಾದರೂ ಉಡುಪಿಗೆ ಬಂದದ್ದು ಮಾತ್ರ ಒಂದೇ ಸಲ. ಕೆಲವರು ಎರಡು ಸಲ ಗಾಂಧೀಜಿ ಉಡುಪಿಗೆ ಬಂದಿದ್ದರು ಎಂದು ಉಲ್ಲೇಖಿಸುತ್ತಾರೆ. ಗಾಂಧೀಜಿ ದಕ್ಷಿಣಕನ್ನಡಕ್ಕೆ ೧೯೨೦ರಲ್ಲಿ ಅಸಹಕಾರ ಚಳುವಳಿಯನ್ನು ಪ್ರೇರೇಪಿಸಲು ಬಂದಿದ್ದರೆ, ೧೯೨೭ರಲ್ಲಿ ಖಾದಿ ಪ್ರಚಾರ ನಿಮಿತ್ತ ಎರಡನೆಯ ಬಾರಿಗೆ ಬಂದಿದ್ದರು. ಆದರೆ, ೧೯೩೪ರ ಹರಿಜನ ಪ್ರವಾಸದ ಸಂದರ್ಭದಲ್ಲಿ ಗಾಂಧೀಜಿ ಕಲ್ಲಿಕೋಟೆಯಿಂದ ಸುಳ್ಯ, ಪುತ್ತೂರು ಮಾರ್ಗವಾಗಿ ಮಂಗಳೂರಿಗೆ ಮೂರನೆಯ ಸಲ ಬಂದು, ಮಂಗಳೂರಿನಿಂದ ಗುರುಪುರ, ಕಟೀಲು, ಕಿನ್ನಿಗೋಳಿ ಮಾರ್ಗವಾಗಿ ಮುಲ್ಕಿ, ಕಟಪಾಡಿಯ ಮೂಲಕ ಉಡುಪಿಗೆ ಬರುತ್ತಾರೆ. ಉಡುಪಿಯ ಅಜ್ಜರಕಾಡಿನ ಎತ್ತರದ ಜಾಗದಲ್ಲಿ ದೇಶಪ್ರೇಮಿಗಳನ್ನು ಉದ್ದೇಶಿಸಿ ಮಾತನಾಡಿ ಅಲ್ಲಿಂದ ಬ್ರಹ್ಮಾವರ ಮೂಲಕ ಕುಂದಾಪುರಕ್ಕೆ ಹೋಗುತ್ತಾರೆ. ಕುಂದಾಪುರದಿಂದ ಹಡಗಿನಲ್ಲಿ ಕಾರವಾರದ ಕಡೆಗೆ ಸಾಗುತ್ತಾರೆ.

ಗಾಂಧೀಜಿಯುವರ ಪ್ರವಾಸದ ಮುಖ್ಯ ಉದ್ದೇಶ ಜನರನ್ನು ಜಾಗೃತರನ್ನಾಗಿಸುವುದು, ದೇಶಾಭಿಮಾನಿಗಳನ್ನಾಗಿಸುವುದು, ಅಸಹಕಾರ, ಸತ್ಯಾಗ್ರಹ, ದೇಸಿ ಬಟ್ಟೆ ಧಾರಣೆ, ಉಪ್ಪು ತಯಾರಿಕೆ– ಇತ್ಯಾದಿಗಳ ಮೂಲಕ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಚೈತನ್ಯವನ್ನು ತುಂಬುವುದು! ಉಡುಪಿಯ ಅಜ್ಜರಕಾಡಿನ ಅವರ ಸಭೆ ಈ ಭಾಗದಲ್ಲೆಲ್ಲ ಜನಜಾಗೃತಿಯನ್ನು ಮೂಡಿಸಿರುವುದಕ್ಕೆ ಅನೇಕ ಸಾಕ್ಷಿಗಳಿವೆ. ಗಾಂಧೀಜಿಯವರ ಅನುಯಾಯಿಗಳಾಗಿದ್ದವರು ತಮ್ಮ ಬದ್ಧತೆಯನ್ನು ಧೃಢಪಡಿಸಿಕೊಂಡರು, ಸ್ವಾತಂತ್ರ್ಯ ಹೋರಾಟ ಎಂಬ ಪ್ರವಾಹಕ್ಕೆ ಸಾವಿರಾರು ಹೊಸ ಧಾರೆಗಳು ಸೇರಿಕೊಂಡವು, ಉಡುಪಿ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಸ್ವರಾಜ್ಯ ಆಂದೋಲನಕ್ಕೆ ನಾಂದಿಯಾಯಿತು. ಇದಕ್ಕೆಲ್ಲ ಕಾರಣವಾದದ್ದು ಅಜ್ಜರಕಾಡು ಎಂಬ ಪ್ರದೇಶದಲ್ಲಾದ ಸಂಚಲನ.

## ಹೋರಾಟದ ಹಾದಿಯಲ್ಲಿ ಮಹಿಳೆಯರು

ಕಿಲ್ಪಾಡಿ ಅಂಬಾಬಾಯಿ ಎಂಬವರು ಮಲ್ಪೆಯ ಕೊಡವೂರು ನಿವಾಸಿಯಾಗಿದ್ದರು. ಅಂಬಾಬಾಯಿ ಪೈ ಅವರ ಪೂರ್ಣ ಹೆಸರು. ೧೯೨೪ರಲ್ಲಿಯೇ ಅವರ ಪತಿ ತೀರಿಕೊಂಡಿದ್ದರು. ಪಾಂಗಾಳ ಮನೋರಮಾ



ನಾಯಕ್, ಗಿರಿಜಾಬಾಯಿ, ಲೀಲಾ ಬಾಯಿ ಮೊದಲಾದವರೊಂದಿಗೆ ಅಂಬಾಬಾಯಿ ಉಡುಪಿಯ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು, ೧೯೩೦ರಲ್ಲಿ ಉಡುಪಿಯಿಂದ ಮಲ್ಪೆಗೆ ಕಾಲ್ನಡಿಗೆಯಲ್ಲಿ ತೆರಳಿದ ಉಪ್ಪಿನ ಸತ್ಯಾಗ್ರಹಿಗಳಲ್ಲಿ ಅಂಬಾಬಾಯಿಯೂ ಇತರ ಮಹಿಳೆಯರೂ ಇದ್ದರು, ಸೇಂದಿ ಅಂಗಡಿ ಪಿಕೆಂಟಿಂಗ್‌ನಲ್ಲಿಯೂ ಮಹಿಳೆಯರು ಮುಂದಿದ್ದರು. ೧೯೩೨ರಲ್ಲಿ ಬಡಗುಪೇಟೆಯಲ್ಲಿ ಪಿಕೆಂಟಿಂಗ್ ಮಾಡಿ ಪೊಲೀಸರಿಂದ ಬಂಧಿತರಾದವರಲ್ಲಿ ಅಂಬಾಬಾಯಿ, ಗಿರಿಜಾಬಾಯಿ ಇದ್ದರು. ಪೊಲೀಸರು ಅವರಿಂದ ಕ್ಷಮಾಯಾಚನೆ ಮಾಡಿಸಿ ಬಿಡುಗಡೆ ಮಾಡಿಸಿದರು. ಆದರೆ, ಅಂಬಾಬಾಯಿ ಬಳಗದವರು ಮತ್ತೆ ಮರುದಿನ ಚಳುವಳಿಯಲ್ಲಿ ತೊಡಗಿದರು. ಅವರನ್ನು ಬಂಧಿಸಿ ಮೂಡಬಿದಿರೆಯ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಮುಂದೆ ಹಾಜರುಪಡಿಸಿ, ೪ ತಿಂಗಳ ಕಠಿಣ ಸಜೆಯನ್ನು ವಿಧಿಸಲಾಯಿತು. ಶಿಕ್ಷೆಯ ಅವಧಿಯಲ್ಲಿ ಅಂಬಾಬಾಯಿ ಬಹಳ ಕಷ್ಟಪಟ್ಟಿದ್ದರು. ಮಂಗಳೂರಿನಲ್ಲಿ ಸಬ್‌ಜೈಲಿನಲ್ಲಿ ೪ ತಿಂಗಳ ಶಿಕ್ಷೆಯ ಅವಧಿ ಮುಗಿದು ಅವರ ಬಿಡುಗಡೆ ಆಯಿತು. ಆವರೆಗೂ ಮಂಗಳೂರು ನೋಡದವರು ಉಡುಪಿಗೆ ಮರಳಲು ತುಂಬ ಕಷ್ಟಪಟ್ಟರು.

## ಪ್ರಸಿದ್ಧ ಪತ್ರಕರ್ತ ಎಂ. ವಿ. ಕಾಮತರ ಅನುಭವ ಖಜಾನೆಯಿಂದ

ಎಂ. ವಿ. ಕಾಮತರ ಮನೆ ಇದ್ದದ್ದು ಅಜ್ಜರಕಾಡಿನ ಸನಿಹದಲ್ಲಿಯೇ. ಅವರು ಹುಟ್ಟಿದ್ದು ೧೯೨೧ರಲ್ಲಿ. ತೀರಿಕೊಂಡದ್ದು ೨೦೧೪ರಲ್ಲಿ. ೧೯೩೪ರಲ್ಲಿ ಗಾಂಧೀಜಿಯವರು ಹರಿಜನ ಪ್ರವಾಸದ ನಿಮಿತ್ತ ಪ್ರವಾಸ ಕೈಗೊಂಡು ಉಡುಪಿಗೆ ಬಂದಾಗ ಎಂ. ವಿ. ಕಾಮತರಿಗೆ ೧೩ರ ಹರೆಯ. ಗಾಂಧೀಜಿಯವರನ್ನು ನೋಡಿದ ಅನುಭವ ಅವರಲ್ಲಿ ಹಸಿರಾಗಿತ್ತು. ತೀರಿಕೊಳ್ಳುವವರೆಗೂ ಅದನ್ನು ಅವರು ಹೇಳಿಕೊಳ್ಳುತ್ತಿದ್ದರು. ಅವರು ತಮ್ಮ 'ಎ ರಿಪೋರ್ಟರ್ ಅಟ್ ಲಾರ್ಜ್' ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಆ ಬರಹದ ಭಾವಾನುವಾದ ಇಲ್ಲಿದೆ :[xii]

*ನನ್ನ ಬಾಲ್ಯದ ದಿನಗಳಲ್ಲಿ ಯಾವ ಹಿರಿಯರಲ್ಲಿ ಮಾತನಾಡಿದರೂ ಸ್ವರಾಜ್ಯ ಮತ್ತು ಮಹಾತ್ಮಾ ಗಾಂಧೀಜಿಯವರ ಪ್ರಸ್ತಾವನೆ ಬರುತ್ತಿತ್ತು. ಸ್ವದೇಶಿ ಚಳುವಳಿ, ಚರಕದಲ್ಲಿ ನೂಲುವುದು – ಇತ್ಯಾದಿಗಳಲ್ಲಿ ಎಲ್ಲರೂ ತೊಡಗಿಸಿಕೊಂಡಿದ್ದರು. ಹೆಚ್ಚಿನವರು ಗಾಂಧೀಜಿಯವರ ಕರೆಗೆ ಓಗೊಟ್ಟು*

*ಬ್ರಿಟಿಷರು ಸ್ಥಾಪಿಸಿದ ಶಾಲೆಯನ್ನು ತೊರೆದಿದ್ದರು. ಒಂದರ್ಥದಲ್ಲಿ ಗಾಂಧೀಜಿಯವರು ಶಾಲೆಯನ್ನು ತೊರೆಯಲು ಕರೆ ನೀಡಿದ್ದು ಎಷ್ಟು ಸರಿ ಎಂಬ ಜಿಜ್ಞಾಸೆ ಮೂಡುತ್ತದೆ. ಹಾಗೆ ಶಾಲೆ ಬಿಟ್ಟವರು ಮುಂದೆ ಉನ್ನತ ಶಿಕ್ಷಣದಿಂದ ವಂಚಿತರಾದರು. ಶಾಲೆಯನ್ನು ತೊರೆದು ಕೂಡ ಮುಂದಿನ ದಿನಗಳಲ್ಲಿ ವೈದ್ಯಕೀಯ ಪದವಿಯನ್ನು ಪೂರೈಸಿದ ಕೀರ್ತಿ ಡಾ. ಎ. ವಿ. ಬಾಳಿಗರದ್ದು. ಅವರು, ಮುಂದೆ ಮುಂಬಯಿಯ ಪ್ರಸಿದ್ಧ ಶಸ್ತ್ರಕ್ರಿಯಾತಜ್ಞರಾದರು.*

ಬಾಲ್ಯದಲ್ಲಿ ಎಲ್ಲರೂ ದೇಶಭಕ್ತಿಯ ಕುರಿತು ಮಾತನಾಡುತ್ತಿದ್ದರೆ ಮಕ್ಕಳಾದ ನಮಗದ ಅರ್ಥವಾಗುತ್ತಿರಲಿಲ್ಲ. ಸಂಜೆ ಶಾಲೆಯಿಂದ ಮರಳಿದ ಬಳಿಕ ಪಾಠ ಅಭ್ಯಾಸದಲ್ಲಿ ತೊಡಗುವ ಮೊದಲು ನಾವು ದೇಶಭಕ್ತಿ ಗೀತೆ ಹಾಡಬೇಕಾಗಿತ್ತು.

**ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಲ್ಪುವೆ ।**
**ಹರುಷದಿಂದ ಪ್ರಾಣ ನೀಡುವೆ ॥**

ಮಾತೃಭೂಮಿ ಅದೃಷ್ಟವಶಾತ್ ನನ್ನಲ್ಲಿ ಪ್ರಾಣವನ್ನು ಕೇಳಲಿಲ್ಲ. ಕೇಳಿದರೆ ಮಾತಿಗೆ ತಕ್ಕಂತೆ ಕೊಟ್ಟುಬಿಡಬೇಕಾಗಿತ್ತೋ ಏನೋ!

ಮಕ್ಕಳಾದ ನಮಗೂ ಚರಕದಲ್ಲಿ ನೂಲುವುದಕ್ಕೆ ಹಿರಿಯರು ಹೇಳುತ್ತಿದ್ದರು. ಯಾಕೆ ಚರಕದಲ್ಲಿ ನೂಲಬೇಕು, ಅದಕ್ಕೂ ಸ್ವರಾಜ್ಯ ಹೋರಾಟಕ್ಕೂ ಇರುವ ಸಂಬಂಧವೇನು ಎಂದು ಯಾರೂ ಹೇಳುತ್ತಿರಲಿಲ್ಲ. ನಮ್ಮ ಮನೆಯಲ್ಲಿಯೂ ಒಂದು ಡಜನ್ ಚರಕಗಳಿದ್ದವು. ಮಹಿಳೆಯರು ಬಿಡುವಿನ ವೇಳೆಯಲ್ಲಿ ನೂಲುತ್ತಿದ್ದರು. ಮಕ್ಕಳಾದ ನಾವೂ ಚರಕದಲ್ಲಿ ನೂಲಬೇಕಾಗಿತ್ತು. ಇದೊಂದು ಬಗೆಯ ತಮಾಷೆಯ ಆಟವಾಗಿತ್ತಲ್ಲದೆ ಆ ಮೂಲಕ ನಾವು ದೇಶಸೇವೆಯನ್ನು ಮಾಡುತ್ತಿದ್ದೇವೆ ಎಂದು ನಮಗೇ ತಿಳಿದಿರಲಿಲ್ಲ. ಆಗ ಬ್ರಿಟನ್‌ನ ಲಂಕಾಶೈರ್‌ನಿಂದ ಬರುತ್ತಿದ್ದ ಬಟ್ಟೆಗಳಿಂದಾಗಿ ದೇಶೀಯವಾಗಿ ತಯಾರಾಗುವ ಬಟ್ಟೆಗಳು ಬೇಡಿಕೆ ಕಳೆದುಕೊಳ್ಳುತ್ತಿದ್ದವು. ನಾವು ಸ್ವತಃ ಬಟ್ಟೆಯನ್ನು ತಯಾರಿಸುವುದರ ವಿದೇಶೀಯರ ಪ್ರಾಬಲ್ಯವನ್ನು ಕುಂದಿಸಬೇಕಾಗಿತ್ತು. ನಾವು ಒಂದು ಗಂಟೆ ಚರಕದಲ್ಲಿ ನೂಲುತ್ತಲೇ ಪರೋಕ್ಷವಾಗಿ ಸ್ವರಾಜ್ಯ ಹೋರಾಟಕ್ಕೆ ನಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದೆವು.

ನಾನು ನೂಲು ತಯಾರಿಕೆಯಲ್ಲಿ ನಿಪುಣನಾಗಿದ್ದೆ ಅಥವಾ ಹಾಗೆಂದು



ಭಾವಿಸಿದ್ದೆ. ಆದರೆ, ಬಟ್ಟೆ ನೇಯುವ ನೇಕಾರ ನನ್ನ ನೂಲನ್ನು ಸ್ವೀಕರಿಸಲು ನಿರಾಕರಿಸಿ ಅದರಲ್ಲಿ ಬಟ್ಟೆ ತಯಾರಿಸಲು ಸಾಧ್ಯವಿಲ್ಲ ಎಂದ. ಕೊನೆಗೆ ನಾನು ಸಿದ್ಧಗೊಳಿಸಿದ ನೂಲು ಮೈಒರೆಸುವ ಬಟ್ಟೆ ತಯಾರಿಕೆಗೆ ವಿನಿಯೋಗಗೊಂಡಿತು.

ನಾನು ಅಮೆರಿಕದಲ್ಲಿರುವಾಗ ನನ್ನ ನೂಲುವ ಆಸಕ್ತಿಯನ್ನು ತಿಳಿದ ಗಾಂಧೀಜಿಯವರ ಆಪ್ತ ವೈದ್ಯೆಯಾಗಿದ್ದ ಸುಶೀಲಾ ನಯ್ಯರ್ ಒಂದು ಚರಕವನ್ನು ನನಗೆ ಉಡುಗೊರೆಯಾಗಿ ಕಳುಹಿಸಿಕೊಟ್ಟಿದ್ದರು. ಅದನ್ನು ಕೆಲವು ಸಮಯ ಬಳಸಿದೆ. ಭಾರತಕ್ಕೆ ಬರುವಾಗ ಅದನ್ನು ಯಾರಿಗೋ ಉಡುಗೊರೆಯಾಗಿ ಕೊಟ್ಟು ಬಂದೆ. ಆ ಚರಕದಲ್ಲಿ ನೂಲುವಾಗಲೆಲ್ಲ ಬಾಲ್ಯದ ಸ್ವಾತಂತ್ರ್ಯ ಹೋರಾಟದ ದಿನಗಳು ನೆನಪಾಗುತ್ತಿದ್ದವು.

ಆ ದಿನಗಳಲ್ಲಿ ಉಡುಪಿಯಲ್ಲಿ ಪ್ರತಿಶನಿವಾರ ಸಂಜೆ ಸಭೆ ನಡೆದು ಹಿರಿಯರೊಬ್ಬರು ಭಾಷಣದಲ್ಲಿ ಚರಕದಲ್ಲಿ ನೂಲುವುದು ಅಥವಾ ವಿದೇಶಿ ಬಟ್ಟೆಗಳನ್ನು ನಿರಾಕರಿಸುವುದರ ಮೂಲಕ ಬ್ರಿಟಿಷರನ್ನು ಪ್ರತಿಭಟಿಸಬೇಕೆಂದು ಹೇಳುತ್ತಿದ್ದರು. ವಿದೇಶೀ ಬಟ್ಟೆಗಳನ್ನು ಉಚಿತವಾಗಿ ನೀಡಿದರೂ ಅವುಗಳನ್ನು ಬೆಂಕಿಗೆ ಹಾಕಿ ಸುಡಲಾಗುತ್ತಿತ್ತು. ಆಗ ಪ್ರಭಾತ ಫೇರಿ ಅಂದರೆ ಮುಂಜಾನೆಯ ಪ್ರತಿಭಟನ ಮೆರವಣಿಗೆ ನಡೆಯುತ್ತಿತ್ತು. ಅದರಲ್ಲಿ ಮಕ್ಕಳಾದ ನಾವು ಭಾಗವಹಿಸಲು ಒತ್ತಾಯಿಸುತ್ತಿದ್ದರು. ನಾನು ಮಾತ್ರ ಮುಂಜಾನೆ ಬೇಗ ಏಳುವುದಕ್ಕೆ ಸಿದ್ಧನಿರಲಿಲ್ಲ ಮತ್ತು ಪ್ರಭಾತಫೇರಿಯಿಂದ ತಪ್ಪಿಸಿಕೊಳ್ಳುತ್ತಿದ್ದೆ.

೧೯೩೦ ಮಾರ್ಚ್ ೧೨ರಂದು ಗಾಂಧೀಜಿ ದಂಡಿ ಸತ್ಯಾಗ್ರಹವನ್ನು ಕೈಗೊಂಡರು. ೨೪೧ ಮೈಲುಗಳ ದೂರವನ್ನು ೨೪ದಿನಗಳ ಕಾಲ ಸತತ ಕಾಲ್ನಡಿಗೆಯಿಂದ ಕ್ರಮಿಸಿ ಎಪ್ರಿಲ್ ೫ರ ರಾತ್ರಿ ಗುಜರಾತ್‌ನ ದಂಡಿಯನ್ನು ತಲುಪಿದರು. ಎಪ್ರಿಲ್ ೬ರ ಬೆಳಗ್ಗೆ ಸಮುದ್ರಕ್ಕೆ ಇಳಿದು ಬಾಗಿ ಒಂದು ಉಪ್ಪಿನ ತುಂಡನ್ನು ಎತ್ತಿಕೊಂಡು ಅದನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡರು. ಅದು ಮುಂದೆ ಇಡೀ ದೇಶದಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಪ್ರೇರಣೆಯಾಯಿತು. ಆ ಉಪ್ಪಿನ ತುಂಡು ಆಮೇಲೆ ೧, ೬೦೦ ರೂಪಾಯಿಗಳ ಗರಿಷ್ಟ ಬೆಲೆಗೆ ಏಲಂ ಆಯಿತು.

ದಂಡಿ ಸತ್ಯಾಗ್ರಹ ಉಡುಪಿಯಲ್ಲಿಯೂ ಪ್ರತಿಧ್ವನಿಸಿತು. ಇಲ್ಲಿ ಮಹಾತ್ಮಾ ಗಾಂಧೀಕಿ ಜೈ ಮತ್ತು ಇಂಕಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳೊಂದಿಗೆ

ಮೆರವಣಿಗೆಯನ್ನು ಸಂಯೋಜಿಸಲಾಯಿತು. ಪೊಲೀಸರು ತಡೆದರು. ಜನ ಕೇಳಲಿಲ್ಲ. ಘರ್ಷಣೆ ಏರ್ಪಟ್ಟಿತು. ಅಂಥ ಘರ್ಷಣೆಯಲ್ಲಿ ಅನೇಕರು ಗಾಯಗೊಂಡರು. ಮಂಗಳೂರಿನಲ್ಲಿ ಜರಗಿದ ಪ್ರತಿಭಟನಾ ಮೆರವಣಿಗೆಯಲ್ಲಿ ಪೊಲೀಸರು ತಮ್ಮ ಮಾತು ಕೇಳದ ಕಾಲೇಜು ಉಪನ್ಯಾಸಕನಿಗೆ ಮನಬಂದಂತೆ ಥಳಿಸಿದರು. ಅವನ ಕೈಕಾಲಿನ ಮೂಳೆಗಳು ಮುರಿದುಹೋದವು. ಅವನು ಯುವಜನರ ವೀರ ನಾಯಕನಾದ. ಉಡುಪಿಯವರಾದ ನಮ್ಮ ಪಾಲಿಗೂ ಅವನು ನೇತಾರನಾಗಿದ್ದ. ಗಾಂಧೀಜಿಯವರ ಕುರಿತ ಅಂದಿನವರ ಭಕ್ತಿ ಅವಿಚ್ಛಿನ್ನವಾಗಿತ್ತು. ಕೆಲ ಸಮಯದ ಬಳಿಕ ನಾನು ಆ ನಾಯಕನ ಬಗ್ಗೆ 'ಮಿಡ್ ಡೇ'ಯ ಅಂಕಣದಲ್ಲಿ ಬರೆದಿದ್ದೆ. ಆತನ ಹೆಸರು ನನಗೆ ಮರೆತುಹೋಗಿತ್ತು. ಆದರೆ, ಪೊಲೀಸರ ಲಾಠಿ ಏಟು ತಿಂದು ಅಪ್ರಜ್ಞಾವಸ್ಥೆ ತಲುಪುತ್ತಿರುವಾಗಲೂ ತನ್ನ ಕೈಯಲ್ಲಿದ್ದ ಉಪ್ಪಿನ ತುಂಡನ್ನು ಬಿಡಲೊಲ್ಲ ಮತ್ತು ಕೈಯಲ್ಲಿರುವ ಧ್ವಜ ಜಾರಿಹೋಗದಂತೆ ಕಾಳಜಿ ವಹಿಸಿದ್ದ. ಅದಾಗಿ ಕೆಲವು ದಿನಗಳ ಬಳಿಕ ನನಗೊಂದು ಫೋನ್ ಬಂದಿತ್ತು. ಆ ವ್ಯಕ್ತಿ ನನ್ನನ್ನು ಕಾಣಲು ಬರುವನೆಂದು ತಿಳಿಸಿದ್ದರು. ನಿಗದಿತವಾದ ದಿನ ನಾನು ನನ್ನ ಕಚೇರಿಯಲ್ಲಿ ಕುಳಿತಿರುವಾಗ ಒಬ್ಬಾಕೆ ಹೆಣ್ಣುಮಗಳು ಬಂದಳು. ತಾನು ಆತನ ಸ್ನೇಹಿತೆಯೆಂದೂ ಆತನ ಮೊಣಕಾಲುಗಳನ್ನು ಮುರಿಯಲಾಗಿರುವುದರಿಂದ ನಡೆಯಲು ಕಷ್ಟವಾಗುತ್ತಿದೆ ಎಂದೂ ಹೇಳಿದಳು. ನಾನು ಆತನನ್ನು ನೋಡಲು ಕೆಳಗೆ ಧಾವಿಸಿದೆ. ವ್ಹೀಲ್ ಚಯರ್‌ನಲ್ಲಿ ಕುಳಿತಿದ್ದ ಆತನನ್ನು ಮಾತನಾಡಿಸಿದೆ. ಆತ ನನ್ನ ನೆನಪನ್ನು ಬಾಲ್ಯಕ್ಕೆ ಒಯ್ದಿದ್ದ. ಆ ದಿನಗಳಲ್ಲಿ ಉಡುಪಿಯ ಹುಡುಗರಾದ ನಮಗೆ ಆತ ಹೀರೋ ಆಗಿದ್ದ.

ಗಾಂಧೀಜಿಯವರ ಕುರಿತು ದೇಶವಾಸಿಗಳಲ್ಲಿದ್ದ ಇಂಥ ನಿಷ್ಠೆ ನಿಜವಾಗಿಯೂ ಆಶ್ಚರ್ಯ ತರಿಸುತ್ತದೆ. ಆದರೆ, ಬಂಧನ ಮತ್ತು ಜೈಲುವಾಸಗಳಿಂದಾಗಿ ಪ್ರಭಾತಫೇರಿಯಂಥ ಚಟುವಟಿಕೆಗಳು ಜನಪ್ರಿಯತೆ ಕಳೆದುಕೊಂಡವು. ಗಾಂಧೀಜಿಯವರ ಮತ್ತೊಂದು ಆಗ್ರಹವೆಂದರೆ ಪಾನನಿರೋಧ ಚಳುವಳಿ. ಪಾನನಿರೋಧವನ್ನು ಪಾಲಿಸುವುದರಿಂದ ಸರ್ಕಾರಕ್ಕೆ ಅಬಕಾರಿಯಿಂದ ಆಗಬಹುದಾದ ಆದಾಯವನ್ನು ತಪ್ಪಿಸಬಹುದು ಎನ್ನುವುದು ಇದರಿಂದ ಸ್ವಾತಂತ್ರ್ಯಚಳುವಳಿಗಾದ ಲಾಭವಾಗಿತ್ತು. ಆದರೆ, ಇದು ಸಮಾಜ ಸುಧಾರಣೆಗೆ ಸಂಬಂಧಿಸಿದ ಚಟುವಟಿಕೆಯೂ ಆಗಿತ್ತು. ಹಾಗೊಂದು ಘಟನೆ ನಡೆಯಿತು.



ಒಬ್ಬ ಪ್ರತಿಭಟನಕಾರನಿಗೆ ಯಾವ ಪರಿಯಲ್ಲಿ ಪೊಲೀಸರು ಹೊಡೆದರೆಂದರೆ ಅವನ ಕುರ್ತಾ ಹರಿದುಹೋಯಿತು. ಮೈಯಲ್ಲಿ ರಕ್ತ ಸೋರಿತು. ಅವನನ್ನು ತರಾತುರಿಯಲ್ಲಿ ಆಸ್ಪತ್ರೆಗೆ ಸೇರಿಸಲಾಯಿತು. ಅವನು ಬದುಕಿದ್ದೇ ದೊಡ್ಡ ಪವಾಡ. ಈ ಮಧ್ಯೆ ಪೊಲೀಸರ ವಿರುದ್ಧ ಪ್ರತಿಭಟನೆಯನ್ನು ಕಾಣಿಸುವುದು ಹೇಗೆ ಬಗ್ಗೆ ಸ್ಥಳೀಯ ಕಾಂಗ್ರೆಸ್ ಸಮಿತಿಯಲ್ಲಿ ಚರ್ಚೆ ನಡೆಯಿತು. ಕೊನೆಗೆ ಆ ವ್ಯಕ್ತಿಯ ಹರಿದ ಕುರ್ತಾದ ಚೂರುಗಳನ್ನು ಒಟ್ಟು ಸೇರಿಸಲಾಯಿತು. ಅದನ್ನು ಮಡಚಿ ಹಾಗೆಯೇ ಸ್ಥಳೀಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗೆ ಉಡುಗೊರೆಯಾಗಿ ನೀಡುವುದೆಂದು ನಿರ್ಧರಿಸಲಾಯಿತು!

ನಿಗದಿತ ದಿನದಂದು ಹಲ್ಲೆಗೊಳಗಾದ ವ್ಯಕ್ತಿ ಗಾಲಿ ಕುರ್ಚಿಯಲ್ಲಿ ಸೀಮಿತ ಮಂದಿಯೊಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್‌ನೊಂದಿಗೆ ಬಂದ. ಅದೊಂದು ಸಾಂಕೇತಿಕ ಪ್ರತಿಭಟನೆಯಾಗಿತ್ತು. ಹಾಗಾಗಿ ಹೆಚ್ಚಿನ ಮಂದಿಯನ್ನು ಜೊತೆಗೆ ಬರಲು ಬಿಡದೆ ದೂರವೇ ನಿಲ್ಲಿಸಲಾಯಿತು. ತಂಡದಲ್ಲಿ ನಾನೂ ಇದ್ದೆ. ಹಲ್ಲೆಗೊಳಗಾದ ವ್ಯಕ್ತಿ ತನ್ನ ಹರಿದ ಕುರ್ತಾದ ಉಡುಗೊರೆಯನ್ನು ಸ್ವೀಕರಿಸುವಂತೆ ಪೊಲೀಸ್ ಇನ್ಸ್‌ಪೆಕ್ಟರ್‌ನನ್ನು ವಿನಂತಿಸಿದ. ಎಲ್ಲರೂ 'ಭಾರತ್ ಮಾತಾ ಕಿ ಜೈ', 'ಮಹಾತ್ಮಾ ಗಾಂಧೀ ಕಿ ಜೈ' ಎಂದು ಕೂಗಿದರು. ಮುಂದೆ ಏನಾಯಿತೆಂದು ಹೇಳುವುದೇ ಬೇಡ! ಅವರು ಯಾರೂ ಸಂಘರ್ಷ ಪ್ರಿಯರಲ್ಲ. ಅಹಿಂಸೆಯೇ ಅವರ ಆಯುಧವಾಗಿತ್ತು. ಪೊಲೀಸರು ಅವರನ್ನು ಯಾವ ಪರಿಯಲ್ಲಿ ಥಳಿಸಿದರೆಂದರೆ ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಚದುರಿದರು. 'ಭಾರತ್ ಮಾತಾ ಕಿ ಜೈ', 'ಮಹಾತ್ಮಾ ಗಾಂಧೀ ಕಿ ಜೈ' ಧ್ವನಿಗಳು ಉಡುಗುವವರೆಗೂ ಪೊಲೀಸರು ಬೆನ್ನಟ್ಟಿದರು. ಕೆಲವರನ್ನು ಜೈಲಿಗೆ ದೂಡಲಾಯಿತು. ಅಂಥವರ ಕುಟುಂಬಗಳು ಕಷ್ಟಪಡುವಂತಾಯಿತು. ಅಂಥವರಲ್ಲಿ ಕೆಲವರಿಗಾದರೂ ಸಹಾಯ ಮಾಡಬೇಕೆಂದು ನಿರ್ಧರಿಸಿ ನಿಧಿ ಸಂಗ್ರಹಿಸಲು ಮುಂದಾದವರಲ್ಲಿ ನನ್ನ ತಂದೆ ವಿಠಲ ಕಾಮತರೂ ಒಬ್ಬರು.

ಉಡುಪಿಯಂಥ ಸಣ್ಣ ಪಟ್ಟಣದಲ್ಲಿ ಏನು ನಡೆಯಿತೋ ಅದು ಇಡೀ ದೇಶದ ಊರು ಊರುಗಳಲ್ಲಿಯೂ ಸಂಭವಿಸಿತು. ಎಷ್ಟೊಂದು ಮಂದಿಯ ವಿರುದ್ಧ ಕೇಸು ದಾಖಲಾಯಿತು! ಎಷ್ಟೊಂದು ಮಂದಿ ಲಾಠಿ ಏಟು ತಿಂದರು! ಯಾರೆಲ್ಲ ಜೈಲುವಾಸ ಅನುಭವಿಸಿದರು! ಇವರೆಲ್ಲರ

ಅನುಭವಗಳು ಎಷ್ಟರ ಮಟ್ಟಿಗೆ ದಾಖಲಾಗಿವೆ. ಎಲ್ಲವೂ ಅನುಕ್ತ ಕತೆಗಳು! ಈ ಎಲ್ಲ ಮಂದಿಯ ಯಾತನೆಗಳೇ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿತೆ?

೧೯೩೦ ರ ಬಳಿಕ ದೇಶಾದ್ಯಂತ ಅಸಹಕಾರ ಚಳುವಳಿ ತೀವ್ರಗೊಳ್ಳುತ್ತಿರುವಂತೆಯೇ ಮಹಾತ್ಮಾ ಗಾಂಧಿ ಸಾಮಾಜಿಕ ಸುಧಾರಣೆಯ ಭಾಗವಾಗಿ 'ಹರಿಜನ ಪ್ರವಾಸ'ವನ್ನು ಕೈಗೊಂಡರು. ಹಾಗೆ ಅವರು ಉಡುಪಿಗೂ ಬಂದಿದ್ದರು. ಉಡುಪಿಗೆ ಬರುವವರೆಗೂ 'ಗಾಂಧೀಜಿ' ಎಂಬುದು ನನ್ನ ಪಾಲಿಗೆ ಒಂದು ಹೆಸರಷ್ಟೇ ಆಗಿತ್ತು. ಹಾಗೆ ನೋಡಿದರೆ ಉಡುಪಿಗೆ ಅವರ ಭೇಟಿ ಮೊದಲ ಸಲವೇನಲ್ಲ. ೧೯೨೭ರಲ್ಲಿ ಮಂಗಳೂರಿಗೆ ಬಂದಿದ್ದ ಅವರು ಕಡಲಹಾದಿಯ ಮೂಲಕ ಮುಂಬೈಗೆ ಹೋಗುವಾಗ ಉಡುಪಿಯ ತೀರದಲ್ಲಿ 'ಸ್ಕ್ಯಾಂಡಿಯಾ ಸ್ಟ್ರೀಮ್‌ಶಿಪ್' (Scindia Stramship)ನಲ್ಲಿ ಕಾಣಿಸಿಕೊಂಡಿದ್ದರು. ಗಾಂಧೀಜಿ ಪಯಣಿಸುವ ಹಡಗು ದೂರದಲ್ಲಿ ಹಾದುಹೋಗುವಾಗ ಅವರನ್ನು ನೋಡಲು ಮಲ್ಪೆಯ ಕಡಲತೀರದಲ್ಲಿ ಜನ ನೆರೆದಿದ್ದರು. ಕೆಲವರು ನಾಡದೋಣಿಯಲ್ಲಿ ಹಡಗಿನ ಬಳಿಗೆ ತೆರಳುವ ಪ್ರಯತ್ನ ನಡೆಸಿದ್ದರು. ಮೇಲಿನ ಡೆಕ್‌ನಲ್ಲಿ ಕಾಣಿಸಿಕೊಂಡಿದ್ದ ಗಾಂಧೀಜಿ ಕೆಲವರಿಗೆ ಕಾಣಿಸಿದ್ದರು. ಕುಳಿತಲ್ಲಿಂದಲೇ ಕೈಬೀಸಿದ್ದರು. ಅವರು ನೆಲದ ಮೇಲೆ ಇಳಿಯದಿದ್ದರೂ ತಮ್ಮ ನಾಡಿನ ಮೂಲಕ ಹಾದುಹೋದ ಸಂಭ್ರಮವನ್ನು ಉಡುಪಿಯ ಜನ ಅನುಭವಿಸಿದ್ದರು. ಈಗ ಸ್ವತಃ ಗಾಂಧೀಜಿಯವರೇ ಉಡುಪಿಗೆ ಬರುವವರಿದ್ದರು. ಮೊದಲಬಾರಿಗೆ ಉಡುಪಿಗೆ ಬಂದುಹೋದ ಘಟನೆಗಳಲ್ಲಿ ನಾನು ನೇರವಾಗಿ ಪಾಲ್ಗೊಳ್ಳುವ ಸಾಧ್ಯತೆ ಇರಲಿಲ್ಲ. ನಾನಿನ್ನೂ ಪುಟ್ಟ ಹುಡುಗನಾಗಿದ್ದೆ. ಆದರೆ, ೧೯೩೪ರಲ್ಲಿ ಗಾಂಧೀಜಿ ಉಡುಪಿಗೆ ಬರುವಾಗ ನಾನು ಎಲ್ಲವನ್ನೂ ನೋಡಿ ಅನುಭವಿಸಬಲ್ಲವನಾಗಿದ್ದೆ.

ಮಹಾತ್ಮಾ ಗಾಂಧಿ ಉಡುಪಿಗೆ ಬರುವ ದಿನ ಇಡೀ ದಕ್ಷಿಣಕನ್ನಡ ಜಿಲ್ಲೆಯ ಎಲ್ಲ ದಾರಿಗಳು ಉಡುಪಿಯ ಅಜ್ಜರಕಾಡಿನತ್ತ ಸಾಗಿ ಬರುತ್ತಿದ್ದವು. ಮಹಾತ್ಮಾ ಬೆಳಗ್ಗೆ ೯ ಗಂಟೆಗೆ ಉಡುಪಿಗೆ ಬರುವುದೆಂದು ನಿಗದಿಯಾಗಿತ್ತು. ಸಾವಿರಾರು ಜನರು ಗಾಂಧೀಜಿಗೆ ನೀಡಲು ಉಡುಗೊರೆಗಳನ್ನು ತಂದಿದ್ದರು. ಆಮೇಲೆ ಆ ಉಡುಗೊರೆಗಳನ್ನು ಏಲಂ ಹಾಕಿ ಸಂಚಯನಗೊಂಡ ಹಣವನ್ನು 'ಹರಿಜನ ನಿಧಿ'ಗೆ ಬಳಸಲಾಯಿತೆನ್ನಿ. ಆಶ್ಚರ್ಯವಾಗಬಹುದು; ಆಗ ಸರಳ,



ಮುಗ್ಧ ಜನರು ತಾವು ಏನನ್ನು ಬೆಳೆಯುತ್ತೇವೆಯೋ, ಏನನ್ನು ಸಂಗ್ರಹಿಸಿದ್ದೇವೆಯೋ ಅವನ್ನೇ ಉಡುಗೊರೆಯಾಗಿ ನೀಡಲು ತಂದಿದ್ದರು. ಏನೇನೆಲ್ಲ ಇರಬಹುದು; ಮೀನು, ಹಣ್ಣುಹಂಪಲು, ತೆಂಗಿನಕಾಯಿ, ತರಕಾರಿ ಕೂಡ! ಅವುಗಳು ಅಭಿಮಾನ ಮತ್ತು ಶುದ್ಧ ಪ್ರೀತಿಯ ಸಂಕೇತಗಳಾಗಿದ್ದವು.

ಮಹಾತ್ಮಾ ಗಾಂಧಿ ಸ್ವಾತಂತ್ರ್ಯ ಹೋರಾಟ, ಗುಲಾಮಗಿರಿಯಿಂದ ಬಿಡುಗಡೆ, ಭಾರತದ ರಾಷ್ಟ್ರೀಯ ಗೌರವವನ್ನು ಮರಳಿ ಸ್ಥಾಪಿಸುವ ಪ್ರಯತ್ನ – ಈ ಮೂಲಕ ಸಾವಿರಾರು ಜನಸಾಮಾನ್ಯರ ಪ್ರೀತಿ – ಅಭಿಮಾನ ಗಳಿಸಿದ್ದರು. ಅವರಿಗಾಗಿ ಗಾಂಧೀಜಿ ಏನನ್ನು ಮಾಡಲೂ ಸಿದ್ಧರಿದ್ದರು. ಮಂಗಳೂರಿನಿಂದ ಉಡುಪಿಗೆ ಬರುವಾಗ ಅವರು ನದಿಗಳನ್ನು ದಾಟಿ ಬರಬೇಕಾಗಿತ್ತು. ಉದ್ಯಾವರ ಹೊಳೆಯನ್ನು ದಾಟುವಾಗ ಅವರ ಕಾರನ್ನು ನಾಲ್ಕು ದೋಣಿಗಳ ಮೇಲೆ ನಿಲ್ಲಿಸಲಾಯಿತು. ಆ ದೋಣಿಗಳನ್ನು ಒದಗಿಸಲು ಮತ್ತು ದೋಣಿಗಳಿಗೆ ಹುಟ್ಟುಹಾಕಲು ಜನ 'ತಾವು ಮುಂದು' , 'ತಾವು ಮುಂದು' ಎಂದು ಮುಂದೆ ಬರುತ್ತಿದ್ದರು. ಯಾರಿಗೆ ಅವಕಾಶ ಮಾಡಿಕೊಡುವುದೆಂಬುದೇ ಒಂದು ಸಮಸ್ಯೆಯಾಯಿತು. ಆಗ ಸ್ಥಳೀಯ ಸಂಘಟಕರು ಒಂದು ಉಪಾಯ ಹೂಡಿದರು. ಯಾರು ಕುಡಿತವನ್ನು ಬಿಡಲು ಸಿದ್ಧರಿದ್ದಾರೋ ಅವರಿಗೆ ಗಾಂಧೀಜಿಯವರ ಕಾರನ್ನು ಹೊರಲು ದೋಣಿಗಳನ್ನು ಒದಗಿಸುವ ಮತ್ತು ಆ ದೋಣಿಗಳಿಗೆ ಹುಟ್ಟುಹಾಕುವ ಅವಕಾಶವನ್ನು ಮಾಡಿಕೊಡುವುದು! ವಿಸ್ಮಯವೆಂದರೆ, ಆ ಕೆಲಸಕ್ಕಾಗಿ ತಾವು ಜೀವನದುದ್ದಕ್ಕೂ ಅಂಟಿಸಿಕೊಂಡಿದ್ದ ಚಟವನ್ನು ಬಿಡಲೂ ಆ ಜನ ಸಿದ್ಧರಿದ್ದರು.

ಉದ್ಯಾವರ ದಾಟಿ ಉಡುಪಿಯ ಕಡೆಗೆ ಬರುವಾಗ ಪ್ರತಿ ಗ್ರಾಮಗಳಲ್ಲಿಯೂ ಜನರು ಗಾಂಧೀಜಿಯವರನ್ನು ನೋಡಲು ಸಹಸ್ರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಜನ ಅವರ ಸುತ್ತ ಯಾವ ಬಗೆಯಲ್ಲಿ ಮುತ್ತುತ್ತಿದ್ದರೆಂದರೆ ಉಡುಪಿಗೆ ಅವರು ನಾಲ್ಕು ಗಂಟೆ ತಡವಾಗಿ ಬಂದರು. ಅವರು ಉಡುಪಿಯ ಅಜ್ಜರಕಾಡು ಮೈದಾನ ತಲುಪುವಾಗ ಸೂರ್ಯ ನೆತ್ತಿಯ ಮೇಲೆ ಬಂದಿದ್ದ. ಆದರೂ ಸಾವಿರಾರು ಸಂಖ್ಯೆಯ ಜನ ಗಲಾಟೆ ಮಾಡದೆ, ಶಿಸ್ತಿನಿಂದ ಮಹಾತ್ಮಾನನ್ನು ಬರಮಾಡಿಕೊಂಡರು. ಅಜ್ಜರಕಾಡು ಮೈದಾನದಲ್ಲಿ ಗಾಂಧೀಜಿ ನೆರೆದ ಜನರನ್ನು ಉದ್ದೇಶಿಸಿ ಮಾತನಾಡಿದರು. ಅವರು

ಮಾತನಾಡಿದ್ದು ಮುಂದಿನ ೩೦–೪೦ ಸಾಲಿನ ಮಂದಿಗೆ ಮಾತ್ರ ಕೇಳಿಸುತ್ತಿತ್ತು. ಭಾಷಣ ಮುಗಿದ ಮೇಲೆ ಸಭೆಯನ್ನು ಮುಕ್ತವಾಗಿ ತೆರೆಯಲಾಯಿತು. ಎಲ್ಲರಿಗೂ ಮಹಾತ್ಮನನ್ನು ಹತ್ತಿರದಿಂದ ನೋಡುವ ಅವಕಾಶ! ಕೆಲವರು ಅವರ ಕಾಲು ಮುಟ್ಟಿ ನಮಸ್ಕರಿಸಿದರು.

ಅಲ್ಲಿಗೆ ಒಬ್ಬಾಕೆ ಬಿಳಿಯ ಅಂಗಿಯ ಸಣ್ಣ ಹುಡುಗಿಯೂ ಬಂದಿದ್ದಳು. ಅವಳು ಆ ಪ್ರದೇಶದ ಕಾಂಗ್ರೆಸ್ ನಾಯಕರ ಮಗಳಾಗಿದ್ದಳು. ಅವಳು ಗಾಂಧೀಜಿಯವರ ಕೈಗೆ ತನ್ನ ಎರಡೂ ಕೈಗಳ ಬಂಗಾರದ ಬಳೆಗಳನ್ನು ತೆಗೆದುಕೊಟ್ಟಳು. ಗಾಂಧೀಜಿ ಅದನ್ನು ಸ್ವೀಕರಿಸಿದರು. ಬಳಿಕ, ಆಕೆಯ ಕುತ್ತಿಗೆ ಮತ್ತು ಕಿವಿಗಳತ್ತ ನೋಡಿದರು. ಆಕೆ, ಬಂಗಾರದ ಕಂಠಹಾರ ಮತ್ತು ಕಿವಿಯೋಲೆಗಳನ್ನು ಧರಿಸಿದ್ದಳು. ಗಾಂಧೀಜಿ ಕೇಳಿದರು, 'ನಿನ್ನ ಕುತ್ತಿಗೆಯಲ್ಲಿ ಚಿನ್ನದಸರವನ್ನು ನೋಡುತ್ತಿರುವೆ. ಅದನ್ನು ಕೊಡುವುದಿಲ್ಲವೆ?'

ಆ ಮಾತು ಆಕೆಯ ಮನಸ್ಸನ್ನು ಅಳ್ಳಾಡಿಸಿತು. ಆಕೆ, ತನ್ನ ಕುತ್ತಿಗೆಯ ಸರವನ್ನು ತೆಗೆದುಕೊಟ್ಟಳು. ಗಾಂಧೀಜಿ ಅದನ್ನು ಸ್ವೀಕರಿಸಿ ಆಕೆಯ ಕರಣಾಭರಣಗಳತ್ತ ನೋಡಿದರು. 'ನಿನ್ನ ಕಿವಿಯೋಲೆಗಳನ್ನು ಕೊಡುವ ಮನಸ್ಸಿಲ್ಲವೇನಮ್ಮ?' ಎಂದು ಕೇಳಿದರು. ಇಡೀ ದೇಶದ ನಾಯಕನೇ ಪುಟ್ಟ ಹುಡುಗಿಯ ಮುಂದೆ ನಿಂತು ಕೇಳುತ್ತಿದ್ದಾರೆ ! ಹುಡುಗಿ ಏನು ತಾನೇ ಮಾಡಬಲ್ಲಳು ! ಏನು ಕೇಳಿದರೂ ಕೊಡಲಾರೆ ಎನ್ನುವ ಬಾಲ್ಯದ ಹರೆಯವದು! ಆದರೆ, ಹುಡುಗಿ ತನ್ನ ಕಿವಿಯ ಆಭರಣಗಳನ್ನು ಕಳಚತೊಡಗಿದಳು. ಅವುಗಳನ್ನು ಗಾಂಧೀಜಿಯ ಕೈಗಿತ್ತಳು.

ಗಾಂಧೀಜಿ ಈಗ ಕೊಂಚ ದಾಕ್ಷಿಣ್ಯವಹಿಸಿ ಕೇಳಿದರು, 'ನಿನಗೆ ಇವೆಲ್ಲವನ್ನು ಕೊಡಲು ನಿನ್ನ ಹೆತ್ತವರು ಹೇಳಿದರೆ?'

ಆಕೆ ಮುಗ್ಧವಾಗಿ ಹೇಳಿದಳು, 'ಇಲ್ಲ, ಕೈ ಬಳೆಗಳನ್ನು ಕೊಡಲು ಮಾತ್ರ ಹೇಳಿದ್ದಾರೆ!'

ಗಾಂಧೀಜಿ ನಕ್ಕು ಹೇಳಿದರು, 'ನಿನ್ನ ಕಂಠಾಭರಣ ಮತ್ತು ಕರಣಾಭರಣಗಳನ್ನು ಹಿಂತಿರುಗಿಸುವೆ. ಆದರೆ, ನನಗೊಂದು ಭಾಷೆ ಕೊಡುವಿಯಾ?'



'ಆಯಿತು' ಎಂದಳು ಹುಡುಗಿ.

'ನೋಡಮ್ಮ, ನಮ್ಮ ದೇಶ ಬಡವರ ದೇಶ. ಇಲ್ಲಿ ಜನ ಒಪ್ಪೊತ್ತಿನ ಊಟ ಮಾಡುವುದಕ್ಕೂ ಕಷ್ಟ ಪಡುವವರಿದ್ದಾರೆ. ಹಸಿವಿನಿಂದ ಬಳಲುವ ಜನರಿರುವ ದೇಶದಲ್ಲಿ ನೀನು ಇನ್ನು ಮುಂದೆ ಎಂದಿಗೂ ಚಿನ್ನದ ಆಭರಣಗಳನ್ನು ಧರಿಸುವುದಿಲ್ಲ ಎಂಬ ಮಾತು ಕೊಡುವಿಯಾ?'

'ನಿಮ್ಮ ಮಾತಿನಂತೆಯೇ ನಡೆಯುತ್ತೇನೆ' ಎಂದು ಮಾತು ಕೊಟ್ಟಳು ಹುಡುಗಿ.

ಆಕೆ ಮತ್ತೆ ಎಂದಿಗೂ ಬಂಗಾರದ ಆಭರಣಗಳನ್ನು ಧರಿಸಲಿಲ್ಲ. ಮುಂದೆ ವೈದ್ಯಕೀಯ ಕಲಿತು ಸ್ತ್ರೀರೋಗತಜ್ಞೆಯಾಗಿ ಪಾಂಡಿಚೇರಿಯ ವೈದ್ಯಕೀಯ ಕಾಲೇಜಿನಲ್ಲಿ ಪ್ರೊಫೆಸರ್ ಆದಳು. ಆಗಲೂ ಆಕೆ ತಾನು ಗಾಂಧೀಜಿಗೆ ಕೊಟ್ಟ ಭಾಷೆಯನ್ನು ಮರೆಯಲಿಲ್ಲ. ಆಗ ಗಾಂಧೀಜಿ ಸ್ವತಃ ಆ ಬಳೆಗಳನ್ನು ಸಭೆಯಲ್ಲಿ ಹರಾಜು ಹಾಕಿದರು. ಆ ಬಳೆಗಳು ಅತ್ಯಂತ ಹೆಚ್ಚಿನ ಬೆಲೆಗೆ ಹರಾಜಾಯಿತು. ಆದರೂ ಗಾಂಧೀಜಿಯವರಿಗೆ ಸಮಾಧಾನವಾಗಲಿಲ್ಲ. 'ನಾನು ಇಷ್ಟು ಕಷ್ಟಪಟ್ಟದ್ದಕ್ಕೆ ಇದೇ ಪ್ರತಿಫಲವೇನು!' ಎಂದರು. ಆಗ ನನ್ನ ತಂದೆ ವಿಠಲ ಕಾಮತರು ವೇದಿಕೆಯ ಮೇಲೆ ಹೋಗಿ ಗಾಂಧೀಜಿಯವರಿಂದ ಆ ಬಳೆಗಳನ್ನು ಪಡೆದು ಹರಾಜು ಕೂಗಲಾರಂಭಿಸಿದರು. ಗಾಂಧೀಜಿಯವರ ನಿರೀಕ್ಷೆಗೆ ಭಂಗ ತರಬಾರದೆಂಬುದು ಅವರ ಯೋಚನೆಯಾಗಿತ್ತು. ವಿಠಲ ಕಾಮತರ ಬೆಂಬಲಿಗರು ಅವರ ಕೈಬಿಡಲಿಲ್ಲ. ಬಳೆಗಳು ಇನ್ನಷ್ಟು ಅಧಿಕ ಬೆಲೆಗೆ ಹರಾಜಾಯಿತು. ಗಾಂಧೀಜಿಯವರಿಗೆ ಸಂತೋಷವಾಯಿತು. ಅವರು ನನ್ನ ತಂದೆಯ ಬೆನ್ನು ತಟ್ಟಿ ವಿನೋದವಾಗಿ, 'ನಾನೇ ಬನಿಯಾ, ನೀವು ನನಗಿಂತಲೂ ದೊಡ್ಡ ಬನಿಯಾ' ಎಂದರು. ನನ್ನ ತಂದೆ ಆ ಮಾತನ್ನು ಸಂಮಾನವೆಂಬಂತೆ ಸ್ವೀಕರಿಸಿದ್ದರು. ಆಗಾಗ ಅದನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದರು. ಹರಾಜಾದ ಬಳೆಗಳ ಮೊತ್ತ ಹರಿಜನ ನಿಧಿಗೆ ವಿನಿಯೋಗವಾಯಿತು.

ಗಾಂಧೀಜಿಯವರದು ಮಾತ್ರವಲ್ಲ, ಮೋತಿಲಾಲ್ ನೆಹರೂರವರ ಅಭಿಮಾನಿಯೂ ನಾನಾಗಿದ್ದೆ. ಮೋತಿಲಾಲ ನೆಹರೂ ಮಾತ್ರವಲ್ಲ, ಭಗತ್ ಸಿಂಗ್, ಸುಖದೇವ್, ರಾಜಗುರು ಮುಂತಾದ ಹುತಾತ್ಮರ ಬ್ಯಾಡ್ಜ್‌ಗಳನ್ನು ಧರಿಸಿ ನಾನು ಶಾಲೆಗೆ ಹೋಗುತ್ತಿದ್ದೆ. ಕಾಂಗ್ರೆಸ್‌ನ ಸಭೆಗಳಲ್ಲಿ ಮೋತಿಲಾಲ

ನೆಹರೂ ಜಿಂದಾಬಾದ್, ಭಗತ್ ಸಿಂಗ್ ಜಿಂದಾಬಾದ್ ಎಂದೆಲ್ಲ ಕೂಗುತ್ತಿದ್ದೆವು. ೧೯೩೧ರ ಫೆಬ್ರವರಿಯಲ್ಲಿ ಮೋತಿಲಾಲ ನೆಹರೂ ತೀರಿಕೊಂಡಾಗ ಉಡುಪಿಯಲ್ಲಿಯೂ ಒಂದು ಮೌನ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ನಾನು ಮೋತಿಲಾಲ ನೆಹರೂ ಅವರ ಹೂವಿನ ಹಾರ ಹಾಕಲಾಗಿದ್ದ ಫೊಟೊ ಹಿಡಿದುಕೊಂಡು ರಥಬೀದಿ, ಅಜ್ಜರಕಾಡಿನಲ್ಲಿ ಆನೆಯ ಮೇಲೆ ಕುಳಿತುಕೊಂಡಿದ್ದೆ. ಆನೆಯ ಮಾವುತ ನನ್ನನ್ನು ಹಿಂದಿನಿಂದ ಹಿಡಿದುಕೊಂಡಿದ್ದ. ನಾನು ಆನೆಯ ಸವಾರಿ ಮಾಡಿದ ಉದಾಹರಣೆ ಅದೊಂದು ಮಾತ್ರ. ಮುಂದೆ ನಾನು ಪತ್ರಕರ್ತನಾಗಿ ಪ್ಯಾರಿಸ್‌ಗೆ ಹೋಗಿದ್ದಾಗ ನನ್ನ ಮನೆಗೆ ಆತಿಥ್ಯ ಸ್ವೀಕರಿಸಲು ಬಂದಿದ್ದ ಇಂದಿರಾಗಾಂಧಿಯವರಿಗೆ ಈ ಘಟನೆಯನ್ನು ಹೇಳಿದೆ. ಆಕೆ ಸಂತೋಷ ಪಟ್ಟರು.

ಉಡುಪಿಗೆ ಜವಹರಲಾಲ ನೆಹರೂ ಬಂದಿದ್ದರು, ಚಕ್ರವರ್ತಿ ರಾಜಗೋಪಾಲಾಚಾರಿ ಬಂದಿದ್ದರು. ನೆಹರೂ ಅವರು ಉಡುಪಿಗೆ ಬಂದದ್ದು ೧೯೩೬ರಲ್ಲಿ. ಅವರನ್ನು ನೋಡಲು ಸಾವಿರ ಸಂಖ್ಯೆಯ ಜನಗಳು ಆಗಮಿಸಿದ್ದರು. ಅವರಿಗೆ ಆತಿಥ್ಯ ನೀಡಲು ಜನ ತಾ ಮುಂದು ತಾ ಮುಂದು ಎಂಬಂತೆ ಮುಂದೆ ಬರುತ್ತಿದ್ದರು. ಜವಹರಲಾಲ ನೆಹರೂ ಉಡುಪಿಯಲ್ಲಿ ನಿಲ್ಲಲಿಲ್ಲ. ಕುಂದಾಪುರದಲ್ಲಿ ವಾಸ್ತವ್ಯ ಹೂಡಿದರು. ಅಲ್ಲಿ ಅವರಿಗೆ ಆಸರೆ ನೀಡಿದವರು ನನ್ನ ಬಂಧುಗಳು. ನನ್ನ ಮಾವ ಮತ್ತು ಅವರ ಕುಟುಂಬವು ನೆಹರೂರವರ ಜೊತೆಗೆ ತೆಗೆದಿದ್ದ ಫೊಟೊ ಅವರ ವಶದಲ್ಲಿ ಜೋಪಾನವಾಗಿತ್ತು.

ರಾಜಗೋಪಾಲಾಚಾರಿಯವರಿಗೆ ಉಡುಪಿಯ ಕಾಂಗ್ರೆಸ್ ನಾಯಕರೊಬ್ಬರು ಆಸರೆ ನೀಡಿದಾಗ ಸ್ವಯಂಸೇವಕನಾಗಿ ನಾನೂ ಹೋಗಿದ್ದೆ. ಮುಂದೆ ನಾನು ಪತ್ರಕರ್ತನಾದಾಗ ಜವಹರಲಾಲ ನೆಹರೂ, ರಾಜಗೋಪಾಲಾಚಾರಿ ಮೊದಲಾದವರ ಸಂದರ್ಶನ ಮಾಡುವ ಅವಕಾಶ ಪಡೆದಿದ್ದೆ.

**ಗಾಂಧೀವಾದಿಗಳಾಗಿರುವ ಕಟಪಾಡಿ ಪಾಂಗಾಳ ನಾಯಕರು**

ಉಡುಪಿಯ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತನಾಡುವಾಗಲೆಲ್ಲ ಉಡುಪಿಯ ಸನಿಹದಲ್ಲಿರುವ ಕಟಪಾಡಿಯ ಪಾಂಗಾಳ ನಾಯಕರ



ಕುಟುಂಬವನ್ನು ಅವಶ್ಯವಾಗಿ ನೆನೆಯಬೇಕಾಗುತ್ತದೆ. ಒಂದು ಗ್ರಾಮದಷ್ಟು ಹರಹಿನಲ್ಲಿರುವ ವಿಶಾಲದ ಮನೆಯಿದು. ಈಗ ಅದನ್ನು ಮನೆಗಳ ಸಮೂಹ ಎನ್ನಬಹುದು. ಮೂಲದ ಮನೆಯನ್ನು ಮಾತ್ರ ಹಾಗೆಯೇ ಇರಿಸಿಕೊಂಡಿದ್ದಾರೆ. ಅಂದರೆ ಹಳೆಯ ತೊಟ್ಟಿಮನೆಯ ಸೌಂದರ್ಯ, ಕೆತ್ತನೆಕುಸುರಿಯ ದಾರುಸ್ತಂಭಗಳ ವೈಭವವನ್ನು ಈಗಲೂ ಕಾಣಬಹುದು. ಆ ಮನೆಯ ಹಿರಿಯ ಸಹೋದರರಾದ ಪಾಂಗಾಳ ಗೋಪಾಲಕೃಷ್ಣ ನಾಯಕರು ಮತ್ತು ಡಾ। ಪಾಂಗಾಳ ಸೀತಾರಾಮ ನಾಯಕರು ಸ್ವಾತಂತ್ರ್ಯ ಹೋರಾಟದ ದಿನಗಳನ್ನು ಮತ್ತು ಅದರಲ್ಲಿ ಭಾಗವಹಿಸಿದ ಪಾಂಗಾಳ ನಾಯಕ್ ಕುಟುಂಬದ ಹಿರಿಯರನ್ನು ನೆನಪಿಸಿಕೊಳ್ಳುತ್ತಾರೆ. ಪಾಂಗಾಳ ಗೋಪಾಲಕೃಷ್ಣ ನಾಯಕರು ೧೯೩೨ರಲ್ಲಿ ಹುಟ್ಟಿದವರಾದರೆ ಸೀತಾರಾಮ ನಾಯಕರು ಗಾಂಧೀಜಿ ಅಜ್ಜರಕಾಡಿಗೆ ಬಂದ ವರ್ಷವೇ ಅಂದರೆ ೧೯೩೪ರಲ್ಲಿ ಹುಟ್ಟಿದವರು. ಪಾಂಗಾಳ ಕುಟುಂಬವು ಇಲ್ಲಿನ ಅನೇಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿತ್ತು. ಪಾಂಗಾಳ ನಾಗಪ್ಪ ನಾಯಕರು ಕುಟುಂಬದ ಹಿರಿಯರು. ಪಾಂಗಾಳ ನಾಯಕ್ ಕುಟುಂಬದವರು 'ಭುವನೇಂದ್ರ ಪ್ರಾಡಕ್ಟ್' ಎಂಬ ಆಯುರ್ವೇದ ಔಷಧಗಳ ಉದ್ಯಮವನ್ನು ಹೊಂದಿದ್ದರು. ೧೯೩೪ರಲ್ಲಿ ಮಹಾತ್ಮಾ ಗಾಂಧಿ ಆ ಅಂಗಡಿಯ ಮುಂದೆ ಬಂದಿದ್ದರು, ಅಲ್ಲಿ ವಿಶ್ರಮಿಸಲಿಲ್ಲ. ಸಮಯಕ್ಕೆ ಸರಿಯಾಗಿ ಉಡುಪಿ ಭೇಟಿಯನ್ನು ಮುಗಿಸಿ ಮತ್ತೆ ಕುಂದಾಪುರಕ್ಕೆ ಹೋಗಿ ಕಾರವಾರಕ್ಕೆ ಹಡಗನ್ನು ಹಿಡಿಯಬೇಕಾಗಿರುವುದರಿಂದ ತರಾತುರಿಯಲ್ಲಿದ್ದರು. ಗಾಂಧೀಜಿಯವರನ್ನು ಜಂಗಲ್‌ನ ಮೂಲಕ ಉದ್ಯಾವರ ಹೊಳೆಯನ್ನು ದಾಟಿಸಲಾಯಿತಂತೆ. ಮುಂದೆ ಕೆಲವು ಸಮಯದ ಬಳಿಕ ಜವಹರಲಾಲ ನೆಹರೂ ಕಟಪಾಡಿಯ ಹಾದಿಯಲ್ಲಿ 'ಪಾಂಗಾಳ ಪ್ರಾಡಕ್ಟ್'ಗೆ ಬಂದು ಹೋಗಿದ್ದರು. ಆ ಛಾಯಾಚಿತ್ರ ಈಗಲೂ ಪಾಂಗಾಳಮನೆಯವರ ಸಂಗ್ರಹದಲ್ಲಿದೆ. ಆಮೇಲೆ ಎಸ್. ನಿಜಲಿಂಗಪ್ಪ, ಜಯಪ್ರಕಾಶ ನಾಯಕರಂಥ ನಾಯಕರು ಪಾಂಗಾಳ ನಾಯಕರ ಮನೆಯಲ್ಲಿ ಭೋಜನ ಸ್ವೀಕರಿಸಿ ವಿರಮಿಸಿ ಹೋಗಿದ್ದರು. ಸ್ವಾತಂತ್ರ್ಯ ಹೋರಾಟ ತುರೀಯಾವಸ್ಥೆಯಲ್ಲಿದ್ದ ದಿನಗಳಲ್ಲಿ ಕಾರ್ನಾಡು ಸದಾಶಿವ ರಾಯರು, ನಾರಾಯಣ ಕಿಲ್ಲೆಯವರು ಪಾಂಗಾಳ ನಾಯಕರ ಮನೆಯಲ್ಲಿ ಆಶ್ರಯ ಪಡೆದದ್ದಿದೆ. ಪಾಂಗಾಳ ಮನೆಯಲ್ಲಿ ಜರಗಿದ ತಾಳಮದ್ದಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ನಾರಾಯಣ ಕಿಲ್ಲೆಯವರು, ಮಲ್ಪೆ ಶಂಕರನಾರಾಯಣ ಸಾಮಗರು ಅರ್ಥ ಮಾತನಾಡಿದ್ದಿದೆ.

ಪ್ರಸ್ತುತ ಪಾಂಗಾಳ ಗೋಪಾಲಕೃಷ್ಣ ನಾಯಕರ ಪ್ರಕಾರ ಆಗ ಉಡುಪಿಗಿಂತ ಅಧಿಕ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ಉಡುಪಿಯಿಂದ ಐದಾರು ಕಿ. ಮೀ. ದೂರ ಇರುವ ಕಟಪಾಡಿಯಲ್ಲಿ ನಡೆಯುತ್ತಿದ್ದವು. ಅದಕ್ಕೆ ಕಾರಣವಿದೆ. ಅದು ಉಡುಪಿಯ ತಾಲೂಕು ಆಫೀಸಿಗಿಂತ ದೂರವಿದ್ದುದರಿಂದ ಅಧಿಕಾರಿಗಳು ಬೇಗನೆ ಅಲ್ಲಿಗೆ ತಲುಪಿ ಜನರನ್ನು ನಿಯಂತ್ರಿಸಲು ಸಾಧ್ಯವಿರಲಿಲ್ಲ. ಮೇಲಾಗಿ ಕಟಪಾಡಿ ಮತ್ತು ಉಡುಪಿಯ ನಡುವೆ ಒಂದು ನದಿ ಇತ್ತು. ಅದನ್ನು ದಾಟಲು ಸುಲಭವಿರಲಿಲ್ಲ. ಪಾಂಗಾಳ ನಾಯಕರ ಕುಟುಂಬವು ಸ್ವಾತಂತ್ರ್ಯ ಹೋರಾಟದ ಪ್ರಕ್ರಿಯೆಯಲ್ಲಿ ಮುಂಚೂಣಿಯ ನಾಯಕತ್ವ ವಹಿಸಿದ್ದು ಕಟಪಾಡಿಯಲ್ಲಿ ಸ್ವದೇಶಿ ಕಾರ್ಯಾಚರಣೆಗಳು ತೀವ್ರಗೊಳ್ಳಲು ಮತ್ತೊಂದು ಕಾರಣವಾಗಿತ್ತು. ೧೯ನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಪಾಂಗಾಳ ಕುಟುಂಬದಲ್ಲಿದ್ದ ಪಾಂಗಾಳ ನಾಗಪ್ಪ ನಾಯಕರ ಇಬ್ಬರು ಗಂಡುಮಕ್ಕಳು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದರು : ಹಿರಿಯ ಮಗ ಮಂಜುನಾಥ ನಾಯಕ್ ಮತ್ತು ಕಿರಿಯ ಲಕ್ಷ್ಮೀನಾರಾಯಣ ನಾಯಕ್.

ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಮಕ್ಕಳು ಪ್ರಸ್ತುತ ನಮ್ಮೊಂದಿಗಿರುವ ಪಾಂಗಾಳ ಗೋಪಾಲಕೃಷ್ಣ ನಾಯಕ್ ಮತ್ತು ಸೀತಾರಾಮ ನಾಯಕರು. ಇಬ್ಬರೂ ತಮ್ಮ ತಂದೆ ಮತ್ತು ದೊಡ್ಡಪ್ಪ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸಕ್ರಿಯರಾಗಿದ್ದ ದಿನಗಳನ್ನು ಅಭಿಮಾನದಿಂದ ನೆನೆಯುತ್ತಾರೆ. ಪಾಂಗಾಳ ಮಂಜುನಾಥ ನಾಯಕರು ಮೂರು ಸಲ ಜೈಲುವಾಸ ಅನುಭವಿಸಿ ಬಂದವರು. ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಪೂರ್ಣ ತೊಡಗಿಸಿಕೊಂಡಿದ್ದರು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಅವರು ಪೊಲೀಸರ ಕಣ್ಣು ತಪ್ಪಿಸಿ ಭೂಗತರಾಗಿದ್ದರು. ಅವರನ್ನು ಪೊಲೀಸರು ಹುಡುಕಾಡುತ್ತಿದ್ದರು ಮತ್ತು ಮನೆಯನ್ನು ಸುತ್ತುವರಿಯುತ್ತಿದ್ದರು. ಬಂಧನದಿಂದ ಪಾರಾಗಲು ತಮ್ಮ ಗೆಳೆಯ ಉಳ್ಳಾಲ ಶ್ರೀನಿವಾಸ ಮಲ್ಯರ ಆಹ್ವಾನದಂತೆ ಮಾರುವೇಷದಲ್ಲಿ ಮುಂಬಯಿಗೆ ಹೊರಟಿದ್ದರು. ದಾರಿಯಲ್ಲೆಲ್ಲಾದರೂ ಊಟಮಾಡುವಾಗ ರುಚಿಗಿರಲಿ ಎಂದು ಉಪ್ಪಿನಕಾಯಿಯನ್ನು ಗಾಜಿನ ಬಾಟಲಿಯಲ್ಲಿ ಹಾಕಿ ಒಯ್ದಿದ್ದರು. ಅದು, ಹುಬ್ಬಳ್ಳಿ ರೈಲ್ವೇಸ್ಟೇಶನ್‌ನಲ್ಲಿ ಕೈಜಾರಿ ಠಣ್ಣನೆ ಬಿದ್ದು ಒಡೆದುಹೋಯಿತು. ಎಲ್ಲರ ಗಮನ ಅದರತ್ತ ಸರಿಯಿತಂತೆ.



ಮಂಜುನಾಥ ನಾಯಕರು ಅದು ಹೇಗೋ ಸಾವರಿಸಿಕೊಂಡು ಅಲ್ಲಿಂದ ತಪ್ಪಿಸಿಕೊಂಡರಂತೆ. ಪಾಂಗಾಳ ಕುಟುಂಬದವರೇ ಆದ ಉಪೇಂದ್ರ ಶ್ರೀನಿವಾಸ ನಾಯಕ್ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲುವಾಸ ಅನುಭವಿಸಿದವರು. ಅವರ ಮಗ ಪಾಂಗಾಳ ಸುರೇಂದ್ರ ನಾಯಕರೂ ಸ್ವಾತಂತ್ರ್ಯ ಹೋರಾಟಗಾರರೇ. ಪಾಂಗಾಳ ಮನೆಯ ದಾಮೋದರ ನಾಯಕ್ ಮತ್ತು ವೇದವ್ಯಾಸ ನಾಯಕ್ ಬ್ರಿಟಿಷರ ವಿರುದ್ಧ ಪ್ರತಿಭಟನೆ ಮಾಡಿ ಹಿಂಡಲಗಾ ಜೈಲುವಾಸ ಅನುಭವಿಸಿ ಬಂದವರು. ಪಾಂಗಾಳ ದಯಾನಂದ ನಾಯಕರು ಮತ್ತೋರ್ವ ಸ್ವಾತಂತ್ರ್ಯ ಹೋರಾಟಗಾರರು.

ಕಟಪಾಡಿಯಲ್ಲಿ ಸಕ್ರಿಯರಾಗಿದ್ದ ಮತ್ತೋರ್ವ ಸ್ವಾತಂತ್ರ್ಯ ಯೋಧ ಕಾಂತಪ್ಪ ಶೆಟ್ಟರು. ಅವರು ಕೆ. ಕೆ. ಶೆಟ್ಟಿ ಎಂದು ಪ್ರಸಿದ್ಧರು. ಆವರೆಲ್ಲರೂ ಸೇರಿಕೊಂಡು ಮೆರವಣಿಗೆ ಹೊರಟು ಉದ್ಯಾವರದ ಬಳಿಯ ಸೇಮಿಕಲ್ಲಪಾದೆ ಎಂಬಲ್ಲಿ ಉಪ್ಪಿನ ಸತ್ಯಾಗ್ರಹ, ವಿದೇಶಿ ವಸ್ತುಗಳ ಸುಡುವಿಕೆ ಮುಂತಾದ ಚಟುವಟಿಕೆಗಳನ್ನು ಮಾಡಿ, ಬಳಿಕ ಮೆರವಣಿಗೆ ಹೊರಟು ದೋಣಿಯಲ್ಲಿ ನದಿ ದಾಟಿ ಅಜ್ಜರಕಾಡಿನತ್ತ ಬರುತ್ತಿದ್ದರು. ಅಜ್ಜರಕಾಡಿನಲ್ಲಿ ಬೇರೆಡೆಯಿಂದ ಬಂದ ಸ್ವಾತಂತ್ರ್ಯಯೋಧರ ಜೊತೆಗೆ ಸಮಾಲೋಚನೆ ನಡೆಯುತ್ತಿತ್ತು. ಉಪ್ಪಿನ ಸತ್ಯಾಗ್ರಹವೊಂದರಲ್ಲಿ ಪಾಂಗಾಳ ಮಂಜುನಾಥ ನಾಯಕರು ಪೊಲೀಸರು ಬಲಪ್ರಯೋಗ ನಡೆಸಿದಾಗಲೂ ಉಪ್ಪಿನ ಹರಳನ್ನು ಮುಷ್ಟಿಯಿಂದ ಬಿಡಲಿಲ್ಲ. ಅವರನ್ನು ಬಳಿಕ ಜೈಲಿಗೆ ಕಳುಹಿಸಲಾಯಿತು. ಒಂಬತ್ತು ತಿಂಗಳು ಜೈಲಿನಲ್ಲಿಯೇ ಇದ್ದರು. ಲಕ್ಷ್ಮೀನಾರಾಯಣ ನಾಯಕ್ ರಾಜಕೀಯ ಪರಿಷತ್ತಿನ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಮಂಜುನಾಥ ನಾಯಕರ ಪತ್ನಿ ಮನೋರಮಾ ಕೂಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತಿಯೊಂದಿಗೆ ಜೈಲುವಾಸವನ್ನು ಅನುಭವಿಸಿದ್ದರು. ಇಬ್ಬರೂ ಮನೆಯಲ್ಲಿ ಚರಕದಲ್ಲಿ ನೂಲುತ್ತಿದ್ದರು. ಸ್ವದೇಶಿ ವಸ್ತುಗಳನ್ನೇ ಬೆಂಬಲಿಸುತ್ತಿದ್ದರು. ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಪತ್ನಿ ಅಂದರೆ, ಪಾಂಗಾಳ ಗೋಪಾಲಕೃಷ್ಣ ನಾಯಕರ ಮತ್ತು ಸೀತಾರಾಮ ನಾಯಕರ ತಾಯಿ ಅಂಬಾಬಾಯಿ ಜೈಲುವಾಸವನ್ನು ಅನುಭವಿಸದಿದ್ದರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪರೋಕ್ಷವಾಗಿ ಭಾಗವಹಿಸಿದ್ದರು. ಆಸಕ್ತರಿಗೆ ಹಿಂದಿಯನ್ನು ಕಲಿಸುವುದರ

ಮೂಲಕ ರಾಷ್ಟ್ರಪ್ರೇಮವನ್ನು ಪ್ರಕಟಿಸುತ್ತಿದ್ದರು. ಅವರು ಬಿಡುವಿನ ವೇಳೆಯಲ್ಲಿ ಚರಕದಲ್ಲಿ ನೂಲುತ್ತಿದ್ದರು. ಇಡೀ ಕುಟುಂಬವೇ ಮಹಾತ್ಮಾ ಗಾಂಧೀಜಿಯವರ ಬಗ್ಗೆ ಅವಿಚ್ಛಿನ್ನ ಭಕ್ತಿಯನ್ನು ಹೊಂದಿತ್ತು. ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು ಆರ್‌ಎಸ್‌ಡಿ ಅಂದರೆ ರಾಷ್ಟ್ರೀಯ ಸೇವಾದಳದ ಸಕ್ರಿಯ ಕಾರ್ಯಕರ್ತರಾಗಿದ್ದರು. ಅವರು ಕಾಂಗ್ರೆಸ್‌ನ ಸಭೆಗಳಿಗಾಗಿ ಪ್ರಾಂತ್ಯದಲ್ಲಿ ಸಂಚಾರ ಮಾಡುತ್ತಿದ್ದರು. ಹಾಗೆ ಧಾರವಾಡಕ್ಕೆ ಹೋಗಿಬಂದಾಗ ತಮ್ಮ ತಂದೆ ಮನೋಹರ ಗ್ರಂಥಮಾಲೆಯಿಂದ ಪುಸ್ತಕಗಳನ್ನು ತರುತ್ತಿದ್ದರೆಂದೂ ಅದನ್ನು ಅಸ್ಥೆಯಿಂದ ತಾವು ಓದುತ್ತಿದ್ದೆವೆಂದೂ ಗೋಪಾಲಕೃಷ್ಣ ನಾಯಕರು ಈಗ ನೆನಪಿಸಿಕೊಳ್ಳುತ್ತಾರೆ.

ಪಾಂಗಾಳ ಮಂಜುನಾಥ ನಾಯಕರ ಮಗಳು ನಿರುಪಮಾ ನಾಯಕ್, ಮಗ ಪಂಡರೀನಾಥ ನಾಯಕ್ (ನಿಜ ಹೆಸರು ರಾಮಕೃಷ್ಣ ನಾಯಕ್) ಇಬ್ಬರೂ ೧೯೩೪ರಲ್ಲಿ ಅಜ್ಜರಕಾಡಿನಲ್ಲಿ ಗಾಂಧೀಜಿಯವರ ಸನಿಹವೇ ನಿಂತಿದ್ದರು. ಬಾಲಕಿ ನಿರುಪಮಾ ತಮ್ಮ ಬಂಗಾರದ ಆಭರಣಗಳನ್ನು ಗಾಂಧೀಜಿಯವರ ಕೈಗೆ ನೀಡಿದವರು. ಆಗಿನ್ನೂ ಆಕೆ ಪುಟ್ಟ ಹುಡುಗಿ. ಮುಂದೆ ಆಕೆ ದೊಡ್ಡ ವೈದ್ಯೆಯಾದರು. ಅವರ ಸಹೋದರ ಪಂಡರೀನಾಥರೂ ಇಂಜಿನಿಯರ್ ಆಗಿ ದೊಡ್ಡ ಹೆಸರು ಪಡೆದರು. ಇನ್ನೊಂದು ಕುತೂಹಲಕರ ಘಟನೆಯನ್ನು ಪಾಂಗಾಳ ಸೀತಾರಾಮ ನಾಯಕ್ ನೆನಪಿಸಿಕೊಳ್ಳುತ್ತಾರೆ. ಅವರ ತಾಯಿ ಪಾಂಗಾಳ ಅಂಬಾಬಾಯಿ ನಾಯಕ್ ಅವರ ಸಹೋದರಿ ಕೆಲವು ದಿನಗಳ ಹಿಂದಷ್ಟೆ ಮಗುವನ್ನು ಹೆತ್ತಿದ್ದರು. ಆ ಮಗುವನ್ನು ಅಜ್ಜರಕಾಡಿನಲ್ಲಿ ಗಾಂಧೀಜಿಯವರ ಕೈಯಲ್ಲಿಟ್ಟು ಹೆಸರು ಇಡುವಂತೆ ತಾಯಿ ವಿನಂತಿಸಿದರು. ಆಗ ಗಾಂಧೀಜಿ, ಆ ಮಗುವಿಗೆ, 'ಶಕುಂತಲಾ' ಎಂದು ಹೆಸರಿಟ್ಟರಂತೆ!

ಪಾಂಗಾಳ ಗೋಪಾಲಕೃಷ್ಣ ನಾಯಕರು ತಮ್ಮ ಊರಿನ ಮತ್ತೋರ್ವ ವ್ಯಕ್ತಿಯನ್ನು ನೆನಪಿಸಿಕೊಳ್ಳುತ್ತಾರೆ : ಅವರು ಗೋಪಾಲ ಕೋಟ್ಯಾನ್. ಅವರು, ಹಿಂದೆಮುಂದೆ ಯೋಚಿಸದೆ ಸಂಗ್ರಾಮಕ್ಕೆ ಧುಮುಕಿದವರು. ಪಾಂಗಾಳ ಗೋಪಾಲಕೃಷ್ಣರು ಹೇಳುವುದು ಹೀಗೆ – ತಮಗಾದರೂ ಮನೆತನದ ಹಿನ್ನೆಲೆ ಇತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಮನೆಗೆ ಮರಳಿದರೂ ಊಟಕ್ಕೆ ತತ್ವಾರವಿರಲಿಲ್ಲ. ಆದರೆ, ಅವರೆಲ್ಲ ಗಟ್ಟಿ ಹಿನ್ನೆಲೆಯಿಂದ ಬಂದವರಲ್ಲ. ಆದರೂ, ಅವರ ದೇಶಭಕ್ತಿ, ಗಾಂಧಿಭಕ್ತಿಯಲ್ಲಿ ಪ್ರಾಮಾಣಿಕತೆ ಇತ್ತು. ಗೋಪಾಲ ಕೋಟ್ಯಾನರ ಹೆಸರನ್ನು ಒಂದು ರಸ್ತೆಗೆ ಕೊಡಬೇಕೆಂಬುದು ಪಾಂಗಾಳ ಗೋಪಾಲಕೃಷ್ಣ ನಾಯಕರ ಹಂಬಲವಾಗಿತ್ತು.



ಉಡುಪಿ ಮಾತ್ರವಲ್ಲ, ಕಾರ್ಕಳದಲ್ಲಿಯೂ ಸ್ವಾತಂತ್ರ್ಯ ಚಳುವಳಿಯ ಕಾವು ಇತ್ತು. ೧೯೪೩–೪೪ ಸುಮಾರಿಗೆ ಕಾರ್ಕಳದ ಅನಂತಶಯನ ದೇವಸ್ಥಾನದ ಆವರಣದಲ್ಲಿ ಒಂದು ಪ್ರತಿಭಟನ ಸಭೆ ಆಯೋಜನೆಗೊಂಡಿತ್ತು. ಆಗ ತಮ್ಮ ತಂದೆಯವರ ಪ್ರೋತ್ಸಾಹದಿಂದ ಬಾಲಕ ಗೋಪಾಲಕೃಷ್ಣ ನಾಯಕರೂ ಕಾರ್ಕಳಕ್ಕೆ ಹೋಗಿಬಂದಿದ್ದರು. ಕಾರ್ಕಳದಲ್ಲಿ ಎಂ. ಡಿ. ಅಧಿಕಾರಿ, ಆಯಿಲ್‌ಮಿಲ್ಸ್‌ನ ವಾಸುದೇವ ಪ್ರಭು, ಸೋಮನಾಥ ಗೋಖಲೆ, ಎಚ್. ನಾರಾಯಣ ಶೆಟ್ಟಿ, ಕೆ. ಜನಾರ್ದನ ಮಂಜುನಾಥ ಶೆಣೈ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಬಾಲಕ ಗೋಪಾಲಕೃಷ್ಣ ನಾಯಕರಿಗೆ ಆಗ ಧರಿಸುವುದಕ್ಕೆ ವಿಶೇಷವಾದ ಉಡುಪೇನೂ ಇರಲಿಲ್ಲ. ಉಡುಪಿಯಿಂದ ಕಾರ್ಕಳಕ್ಕೆ ಹೋದದ್ದು ಮಸಿಯ ಇಂಧನದಿಂದ ಓಡುವ ಬಸ್ಸಿನಲ್ಲಿ. ಗೋಪಾಲಕೃಷ್ಣ ನಾಯಕರ ನೆನಪಿನಲ್ಲಿ ಹೇಳುವುದಾದರೆ ಒಮ್ಮೆ ಕಟಪಾಡಿಯಲ್ಲಿಯೋ ಅಜ್ಜರಕಾಡಿನಲ್ಲಿಯೋ ಪ್ರತಿಭಟನೆ ನಡೆದಾಗ ಮಲಬಾರ್ ಕಡೆಯಿಂದ ಬರುವ ಪೊಲೀಸರು ಶೂಟ್ ಮಾಡುತ್ತಾರೆಂದು ಪೂರ್ವಸೂಚನೆ ದೊರೆತಿದ್ದರಿಂದ ಹುಡುಗರನ್ನು ಮನೆಗೆ ಕಳುಹಿಸಿದ್ದರು. ಆದರೆ, ಗೋಪಾಲಕೃಷ್ಣ ನಾಯಕರ ತಂದೆ, ದೊಡ್ಡತಂದೆಯವರು ವದಂತಿಯನ್ನು ಲೆಕ್ಕಿಸದೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪಾಂಗಾಳ ಗೋಪಾಲಕೃಷ್ಣ ನಾಯಕರು ಹೇಳುವ ಪ್ರಕಾರ ಆಗ ಮಂಗಳೂರಿನಿಂದ ಉಡುಪಿಗೆ ಓಡಾಡುವುದೇ ಕಷ್ಟವಾಗಿತ್ತು. ಯಾವ ನದಿಗೂ ಸೇತುವೆ ಇರಲಿಲ್ಲ. ಗಾಂಧೀಜಿಯವರು ಮಂಗಳೂರಿನಿಂದ ಕಟೀಲು–ಕಿನ್ನಿಗೋಳಿ ಮಾರ್ಗದಲ್ಲಿ ಬಂದು ಮುಲ್ಕಿಯಲ್ಲಿ ಭಾಷಣ ಮಾಡಿದ್ದರು. ಮುಂದೆ, ಉಡುಪಿಯತ್ತ ಬಂದಿದ್ದರು. ದೇಶ ಸ್ವಾತಂತ್ರ್ಯ ಗಳಿಸಿದ ರಚನೆಗೊಂಡ ಸರಕಾರದಲ್ಲಿ ಸಂಸದರಾಗಿದ್ದ ಉಳ್ಳಾಲ ಶ್ರೀನಿವಾಸ ಮಲ್ಯರು ಅಂದಿನ ಪ್ರಧಾನಿ ಲಾಲಬಹದ್ದೂರ ಶಾಸ್ತ್ರಿಗಳು ಮಂಗಳೂರಿಗೆ ಬಂದಾಗ ನದಿಯ ಬಳಿಗೆ ಕರೆದೊಯ್ದು, ಸೇತುವೆ ನಿರ್ಮಿಸಬೇಕಾದ ಅಗತ್ಯವನ್ನು ಮನದಟ್ಟು ಮಾಡಿದ್ದರು. ಪ್ರಧಾನಿಗಳು ತತ್‌ಕ್ಷಣ ಸೇತುವೆ ಕಾಮಗಾರಿಯನ್ನು ಮಂಜೂರು ಮಾಡಿದ್ದರು.[xiii]

## ಉಡುಪಿಯ ಸ್ವಾತಂತ್ರ್ಯ ಯೋಧರು

ದೇಶದಲ್ಲಿ ಹಲವು ನೆಲೆಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಉಡುಪಿಯ ಅಜ್ಜರಕಾಡಿನಲ್ಲಿಯೂ ಕಾಲಕಾಲಕ್ಕೆ ಪ್ರತಿಧ್ವನಿಗೊಂಡಿತು. ೧೯೨೦ರ ಅಸಹಕಾರ ಚಳುವಳಿ, ೧೯೩೦ರ ಉಪ್ಪಿನ ಸತ್ಯಾಗ್ರಹ, ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ಇವೆಲ್ಲದರ ಕಿರು ಪ್ರತಿಕೃತಿಗಳು ಅಜ್ಜರಕಾಡಿನಲ್ಲಿ ಸಂಭವಿಸುತ್ತಿದ್ದವು. ಉಡುಪಿಯ ಮಂದಿ ವಿದೇಶಿ ಬಟ್ಟೆಗಳನ್ನು ಅಜ್ಜರಕಾಡಿನ ಬಯಲಿಗೆ ತಂದು ಸುಡುತ್ತಿದ್ದರು. ಹೆಚ್ಚಿನವರು ತಮ್ಮ ಮನೆಯಲ್ಲಿ ಚರಕ ಇಟ್ಟುಕೊಂಡು ನೂಲುತ್ತಿದ್ದರು. ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. ಮಲ್ಪೆಯಲ್ಲಿ ಉಪ್ಪು ತಯಾರಿಸುತ್ತಿದ್ದರು. ಉಡುಪಿಯಲ್ಲಿ ಎಸ್. ಯು. ಪಣಿಯಾಡಿಯವರು 'ಕೃಷ್ಣದಳ' ಎಂಬ ತಂಡವನ್ನು ಕಟ್ಟಿಕೊಂಡು ರಥಬೀದಿಯಲ್ಲಿ ಸಕ್ರಿಯರಾಗಿದ್ದವರು. ಉಡುಪಿ ಅದಮಾರು ಮಠದ ಸ್ವಾಮೀಜಿಗಳಾದ ಶ್ರೀವಿಬುಧೇಶ ತೀರ್ಥರು ತಮ್ಮ ಪೂರ್ವಾಶ್ರಮದಲ್ಲಿ ಸ್ವರಾಜ್ಯ ಕಾರ್ಯಾಚರಣೆಗಳಲ್ಲಿ ಸಕ್ರಿಯರಾಗಿದ್ದವರು. ಪೀಠ ಸ್ವೀಕರಿಸಿದ ಬಳಿಕವೂ ವೈಚಾರಿಕತೆಯನ್ನು ನಿರಂತರವಾಗಿಸಿ ಸ್ಥಳೀಯರೆಲ್ಲ ಆಧುನಿಕ ಶಿಕ್ಷಣ ಲಭ್ಯವಾಗುವಂತೆ ಮಾಡಲು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶ ತೀರ್ಥರು ಸ್ವತಃ ಗಾಂಧೀವಾದದಿಂದ ಪ್ರಭಾವಿತರಾದವರು. ದಲಿತೋದ್ಧಾರದ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಹಿರಿಯರಾದ ರೋಕಿ ಫೆರ್ನಾಂಡೀಸರು ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ವಿದ್ಯಾರ್ಥಿಗಳನ್ನು ದೇಶಸೇವೆಯ ಕೆಲಸಕ್ಕೆ ಪ್ರೇರೇಪಿಸುತ್ತಿದ್ದವರು.

ಆಗಿನ ಹಿರಿಯರೆಲ್ಲ 'ಗಾಂಧೀಜಿ ಅಜ್ಜರಕಾಡಿಗೆ ಬಂದಿದ್ದರು' ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಗಾಂಧೀಜಿ ಅಜ್ಜರಕಾಡಿಗೆ ಬಂದದ್ದು ಕೇವಲ ಘಟನೆಯಷ್ಟೇ ಅಲ್ಲ, ಅದು ಇಡೀ ಉಡುಪಿಯ ಉದಾರವಾದಿ ಸಂಸ್ಕೃತಿಯನ್ನು ರೂಪಿಸಿದಂಥ ಸಂಚಲನ ಎಂದು ಭಾವಿಸುವುದರಲ್ಲಿ ಔಚಿತ್ಯವಿದೆ. ಬಹುಶಃ ಅಂದಿನ ಸಭೆಯಲ್ಲಿ ಉಡುಪಿಯ ಮತ್ತು ಉಡುಪಿಯ ಸುತ್ತಮುತ್ತಲಿನ ಸಾವಿರಾರು ಮಂದಿ ಭಾಗವಹಿಸಿದ್ದರು. ಲಕ್ಷಾಂತರ ಮಂದಿ ದೂರದಲ್ಲಿದ್ದುಕೊಂಡೇ ಗಾಂಧೀಜಿಯವರ ಮಾತುಗಳಿಂದ ಪ್ರಭಾವಿತರಾಗಿದ್ದರು.



ಸಾಂತ್ಯಾರು ಅನಂತಪದ್ಮನಾಭ ಭಟ್, ಪಣಿಯಾಡಿ ಶ್ರೀನಿವಾಸ ಉಪಾಧ್ಯ, ಆರ್. ಎಸ್. ಶೆಣೈ, ಪಾಂಗಾಳ ಮಂಜುನಾಥ ನಾಯಕ್, ರೋಕಿ ಫೆರ್ನಾಂಡೀಸ್, ಕೆ. ಕೆ. ಶೆಟ್ಟಿ, ಹಾಜಿ ಅಬ್ದುಲ್ಲಾ, ತೋನ್ಸೆ ಮುಕುಂದ ಪೈ, ನಯಂಪಳ್ಳಿ ಆನಂದ ರಾವ್, ಸತ್ಯಮಿತ್ರ ಬಂಗೇರ, ಎಂ. ವಿಠಲ ಕಾಮತ್, ಹಿರಿಯಡಕ ರಾಮರಾಯ ಮಲ್ಯ, ಮಲ್ಪೆ ಶಂಕರನಾರಾಣ ಸಾಮಗ, ಅಂಬಾಬಾಯಿ ಪೈ, ಡಿ. ಬಿ. ಅಂತಯ್ಯ ಶೆಟ್ಟಿ, ಎಂ. ಲಕ್ಷ್ಮೀನಾರಾಯಣ ಬಲ್ಲಾಳ, ಬಾಗೀರಥಿ ಬಾಯಿ, ಪಾಂಗಾಳ ಮನೋರಮಾ ನಾಯಕ್, ಕುರ್ಕಾಲು ಗಣಪಯ್ಯ ಶೆಟ್ಟಿ, ಕೆ. ಪದ್ಮನಾಭ ಶೆಣೈ, ಬಿ. ಗೋಪಾಲಕೃಷ್ಣ ಕಾಮತ್, ಉದ್ಯಾವರ ಶಾಂತಾರಾಮ ರಾವ್, ಟಿ. ವಾಸುದೇವ ಶೆಣೈ, ಬಡಗುಬೆಟ್ಟು ಕೃಷ್ಣಯ್ಯ ಹೆಗ್ಡೆ , ಶೇಷಪ್ಪ ಶೆಟ್ಟಿ, ಉಡುಪಿ ಗೋವಿಂದ ರಾವ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮ, ಎಂ. ವಿ. ಹೆಗ್ಡೆ , ರಾಮಪ್ಪ ಜಿ. ಸಾಲ್ಯಾನ್, ಯು. ಶೇಷ, ಹೊನ್ನಯ್ಯ ಶೆಟ್ಟಿ, ಬಿ. ಶಂಭು ಶೆಟ್ಟಿ, ಪಿ. ವಾಸುದೇವ ಪೈ, ಮನ್ನಾ ಸಾಹೇಬ... ಈ ಪಟ್ಟಿಯೇನೂ ಪ್ರಾತಿನಿಧಿಕವಲ್ಲ. ಭಾಗವಹಿಸಿದ ಎಲ್ಲರ ಹೆಸರುಗಳು ಇಲ್ಲಿವೆ ಎಂದೇನೂ ಅಲ್ಲ. ಇಲ್ಲಿನ ಪ್ರತಿಯೊಬ್ಬರೂ ನೂರಾರು ಮಂದಿಯನ್ನು ಪ್ರತಿನಿಧಿಸುತ್ತಾರೆ. ಅಜ್ಜರಕಾಡಿನಲ್ಲಿ 'ಬೀಜಾಂಕುರ'ವಾದದ್ದು ಚಿಗುರಿ, ಗಿಡವಾಗಿ, ಮರವಾಗಿ ಕೊಂಬೆಗಳನ್ನು ಉಡುಪಿ ಜಿಲ್ಲೆ ಇಡೀ ಹರಡಿಕೊಂಡಿತು. ಅದು ಅಜ್ಜರಕಾಡಿನಲ್ಲಿ ಬೆಳೆದು ನಿಂತಿರುವ ಬೃಹತ್ 'ಗಾಂಧಿವೃಕ್ಷ' ![xvi]

❑

## ಅಡಿ ಟಿಪ್ಪಣಿಗಳು

i ಎಸ್. ಯು. ಪಣಿಯಾಡಿಯವರನ್ನು ಕುರಿತ ಮಾಹಿತಿಯನ್ನು 'ಎಸ್. ಯು. ಪಣಿಯಾಡಿ' ಪುಸ್ತಕದಿಂದ ಪಡೆಯಲಾಗಿದೆ. ಎಸ್. ಯು. ಪಣಿಯಾಡಿ ; ಮುರಲೀಧರ ಉಪಾಧ್ಯ ಹಿರಿಯಡಕ (ಲೇ.) ; ೧೯೯೭; ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ (ಪ್ರ.)

ii ವಿನೀತ್ ರಾವ್ ಹೇಳುವಂತೆ, ಈಗ ಅವರ ಅಜ್ಜನವರ ಸಮಕಾಲೀನರಾಗಲಿ, ಶೇಷರವರ ಸಮಕಾಲೀನರಾಗಲಿ– ಯಾರೂ ಇಲ್ಲ. ಸ್ವಲ್ಪ ವರ್ಷಗಳ ಮೊದಲೇ ಅವರಿಂದ ಮಾಹಿತಿಗಳನ್ನು ಸಂಗ್ರಹಿಸಬೇಕಿತ್ತು. ಆಗ, ಉಡುಪಿಯ 'ಸ್ವರಾಜ್ಯ ಕಥನ'ದ ಮತ್ತೊಂದು ಅಧ್ಯಾಯ ತೆರೆದುಕೊಳ್ಳುತ್ತಿತ್ತು.

iii ಸ್ವರಾಜ್ಯ ವಿಜಯ ; ಎಂ. ವಿ. ಹೆಗ್ಡೆ ; ೧೯೪೭ ; ಕಿರಿಯರ ಪ್ರಪಂಚ, ಉಡುಪಿ

iv ಉಡುಪಿಯ ಸ್ವಾತಂತ್ರ್ಯ ಹೋರಾಟದ ವಿಚಾರಕ್ಕೆ ಸೂರ್ಯನಾಥ ಕಾಮತ್‌ರ ಕೃತಿಯೇ ಮುಖ್ಯ ಆಕರ. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು; ಡಾ॥ ಸೂರ್ಯನಾಥ ಕಾಮತ್ (ಸಂ.) ; ೧೯೭೪ ; ಗೀತಾ ಬುಕ್ ಹೌಸ್. ನ್ಯೂ ಸ್ಟಾಚ್ಯೂ ಸರ್ಕಲ್, ಮೈಸೂರು

**ಗಾಂಧೀಜಿಯವರ ಕರ್ನಾಟಕ ಪ್ರವಾಸದ ಕುರಿತ ಮುಖ್ಯ ಕೃತಿ : ಗಾಂಧೀಜಿ ಮತ್ತು ಕರ್ನಾಟಕ ; ಬೆಳಗೆರೆ ಕೃಷ್ಣ ಶಾಸ್ತ್ರೀ (ಲೇ.) ; ಸೂರ್ಯನಾಥ ಕಾಮತರ 'ದಕ್ಷಿಣಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ' ಲೇಖನ 'ಸುದರ್ಶನ'ದಲ್ಲಿ ಪ್ರಕಟವಾಗಿದೆ.**

**ಸುದರ್ಶನ ; ಅಡ್ಯನಡ್ಕ ಕೃಷ್ಣ ಭಟ್ (ಸಂ.) ; ೧೯೯೭; ವಿಜಯಾ ಕಾಲೇಜು ಟ್ರಸ್ಟ್, ಮುಲ್ಕಿ, ದಕ್ಷಿಣಕನ್ನಡ**

**ಇತಿಹಾಸಜ್ಞ ಕೆ. ವಿ. ರಮೇಶರ ಯಾವುದೇ ಕೃತಿಗಳನ್ನು ಇಲ್ಲಿ ಪರಾಮರ್ಶಿಸಲಾಗಿಲ್ಲ.**

v ಹೀಗೆಂದು ವಿಶ್ವವಿಖ್ಯಾತ ಪತ್ರಕರ್ತ ಎಂ. ವಿ. ಕಾಮತರು ತಮ್ಮ ಪುಸ್ತಕದಲ್ಲಿ ಅಜ್ಜರಕಾಡನ್ನು 'ಆಜಿ ಊರುದ ಕಾಡು' ಎಂದು ಬಣ್ಣಿಸಿ ಬರೆದ ಒಂದೆರಡು ಪ್ಯಾರಾಗಳನ್ನು ತಮಗೆ ತೋರಿಸಿದ್ದರೆಂದು ಮತ್ತು ಆ ಪುಸ್ತಕ ಯಾವುದೆಂದು ಈಗ ನೆನಪಿಗೆ ಬರುತ್ತಿಲ್ಲವೆಂದು ಎಂಜಿಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕ ವಿನೀತ್ ರಾವ್ ಹೇಳುತ್ತಾರೆ. ಅಲ್ಲದೆ, ಕೆಲವು ಹಿರಿಯರು ರೂಢಿಯ ಮಾತಿನಲ್ಲಿ ಅಜ್ಜರಕಾಡನ್ನು 'ಆಜಿ ಊರ್ದ ಕಾಡ್' ಎಂದು ವಿವರಿಸುತ್ತಾರೆ.

vi 'ಅಜ್ಜರಕಾಡು' ಎಂಬುದನ್ನು 'ಅಜ್ಜನವರ ಕಾಡು' ಎಂಬರ್ಥದಲ್ಲಿ ಬಳಸುವುದಾದರೆ ಇದು ತುಳುಮೂಲದ ಪದವೆನಿಸುವುದಿಲ್ಲ. 'ಕಾಡ್' ಎಂಬುದು ತುಳುಪದವಾಗಿದೆ. ಹಾಗಾಗಿ, 'ಅಜ್ಜೆರ' ಎಂದು ಬಳಸುವುದು ಸೂಕ್ತವೆನಿಸುತ್ತಿತ್ತು. ಹಾಗಾಗಿ, 'ಅಜ್ಜರ' ಎಂಬುದಕ್ಕೆ ತುಳುಭಾಷೆಯ ಮೂಲದಲ್ಲಿ ಬೇರೆ ಯಾವುದೋ ಅರ್ಥವಿರುವಂತಿದೆ ಅಥವಾ 'ಅಜ್ಜೆರ ಕಾಡ್' ಎಂಬುದೇ ಮೂಲತಃ ಬಳಕೆಯಲ್ಲಿದ್ದಿರಬೇಕು.

vii 'ಅಜ್ಜರಕಾಡು' ಕನ್ನಡ ಪದ. ಅಜ್ಜರಿಂದ ಕಾಡಿಗೆ ಆ ಹೆಸರು ಬಂದಿವುದಾದರೆ ಮೂಲದಲ್ಲಿ 'ಅಜ್ಜೆರಕಾಡ್' ಇರಬೇಕು. 'ಅಜ್ಜೆರ ಕಾಡ್' ಎಂಬುದೇ ಸರಿಯಾದ ಬಳಕೆಯ ಪದ.

viii ಸಂಪನ್ಮೂಲ : 'ನೆನೆ ನೆನೆ ಆ ದಿನವಾ' ನೆನೆ ನೆನೆ ಆ ದಿನವಾ (ಉಡುಪಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ) ; ಶ್ರೀಕಾಂತ ರಾವ್ ಸಿದ್ಧಾಪುರ (ಲೇ.); ೨೦೧೮ ; ಸೀತಾ ಬುಕ್ ಸೆಂಟರ್, ದೀನ್ ದಯಾಳ್ ಮಾರ್ಗ, ಉಡುಪಿ

ix ಸಂಪನ್ಮೂಲ : 'ನೆನೆ ನೆನೆ ಆ ದಿನವಾ'

x ಈ ವರದಿ ಫೆಬ್ರವರಿ ೨೮, ೧೯೩೪ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

The collected works of Mahatma Gandhi; Gandhi Sevagram ashram, Wardha-442102;

xi ಡಾ। ಸೂರ್ಯನಾಥ ಕಾಮತ್ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು (ಪ್ರಥಮ ಸಂಪುಟ); ೧೯೭೪ ; ಗೀತಾ ಬುಕ್ ಹೌಸ್, ನ್ಯೂ ಸ್ಟಾಚ್ಯೂ ಸರ್ಕಲ್, ಮೈಸೂರು

xii A reporter at Large ; M V Kamath ; 2002 ; Bharathiya Vidya Bhavan, Kulapathi Munsi Marg, Delhi

xiii ಪಾಂಗಾಳ ಗೋಪಾಲಕೃಷ್ಣ ನಾಯಕರು ಗಾಂಧೀಜಿಯವರ ಕಾಲದಲ್ಲಿಯೇ ಬದುಕುತ್ತಿರುವವರು. ಅತ್ಯಂತ ಸರಳ ಜೀವಿ. ಖಾದಿಯನ್ನಲ್ಲದೆ ಬೇರೆ ಬಟ್ಟೆಯನ್ನು ಧರಿಸುವುದಿಲ್ಲ. ಅಪಾರ ಜ್ಞಾನವಿದ್ದರೂ ಅಂತರ್ಮುಖಿ ವ್ಯಕ್ತಿತ್ವ. ಅವರ ಸಹೋದರ ಸೀತಾರಾಮ ನಾಯಕರು ಅಮೆರಿಕದಲ್ಲಿ ಪ್ರಸಿದ್ಧ ವೈದ್ಯರಾಗಿದ್ದವರು ಊರಿಗೆ ಮರಳಿದ್ದಾರೆ. ತಾತ್ತ್ವಿಕ ಬದ್ಧತೆಯಲ್ಲಿ ಅವರಿಗೂ ಖಚಿತತೆ ಇದೆ. ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನಾಗಲಿ, ಪಾಂಗಾಳ ಕುಟುಂಬದ ಕಥನವನ್ನಾಗಲಿ ಆಧಾರಗಳನ್ನು ಇಟ್ಟುಕೊಂಡೇ ಬರೆಯಬೇಕು ಎಂಬುದು ಅವರ ಅಭಿಪ್ರಾಯ. ಹಾಗಾಗಿ, ಹಳೆಯ ಕಾಗದಪತ್ರಗಳನ್ನು ಸಂಗ್ರಹಿಸಿ ಅವುಗಳನ್ನು ಕಾಪಿಟ್ಟುಕೊಂಡಿದ್ದಾರೆ. ತಮ್ಮ ಬಗ್ಗೆ ತಾವೇ ಹೇಳಿಕೊಳ್ಳಲು ಅಷ್ಟಾಗಿ ಬಯಸದ ಕಾರಣದಿಂದಲೇ ಪಾಂಗಾಳ ಕುಟುಂಬದ ಕಥೆ ಅಷ್ಟಾಗಿ ದಾಖಲಾದ ಹಾಗೆ ತೋರುತ್ತಿಲ್ಲ. ಬ್ಯಾಂಕಿಂಗ್, ಆಯುರ್ವೇದ, ವ್ಯಾಪಾರ, ಕೃಷಿ, ಸ್ವರಾಜ್ಯ ಹೋರಾಟ ಎಲ್ಲ ಕ್ಷೇತ್ರಗಳಲ್ಲಿಯೂ ಪಾಂಗಾಳ ಕುಟುಂಬದ ಕೊಡುಗೆ ಇದೆ.

ಪ್ರಸ್ತುತ ಈ ಕೃತಿಯಲ್ಲಿ ದಾಖಲಾಗಿರುವ ವಿಚಾರಗಳು ಕೆಲವು ಸುಳಿವುಗಳು ಮಾತ್ರ. ಇವು ಸಮಗ್ರವಾದ ಮಾಹಿತಿಗಳೇನೂ ಅಲ್ಲ. ಪಾಂಗಾಳ ನಾಯಕರ ಕುಟುಂಬದ ಸಾಧನೆಯ ಕುರಿತು ಸಮಗ್ರವಾದ ಕೃತಿಯನ್ನು ಬರೆಯುವ ಅಗತ್ಯವಿದೆ.

xiv ಕೆಲವು ಹೆಸರುಗಳನ್ನು 'ನೆನೆ ನೆನೆ ಆ ದಿನವಾ' ಕೃತಿಯಿಂದ ಆಯಲಾಗಿದೆ.

# ಅನುಬಂಧ

## ಛಾಯಾಚಿತ್ರಗಳು









## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |